RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I *Part–I*	ಬೆಂಗಳೂರು, ಶುಕ್ರವಾರ, ಜೂನ್ ೧, ೨೦೧೮ (ಜ್ಯೇಷ್ಠ ೧೧, ಶಕ ವರ್ಷ ೧೯೪೦) *Bengaluru, Friday, June 1, 2018 (Jyeshta 11, Shaka Varsha 1940)*	ನಂ. ೮೪೪ *No. 844*

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ: ನಗರಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಮತಪತ್ರಗಳನ್ನು ಮುದ್ರಿಸುವ ಬಗ್ಗೆ.

ಓದಲಾಗಿದೆ: ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 14 ಇಯುಬಿ 2017, ದಿನಾಂಕ:10.03.2017

ಪ್ರಸ್ತಾವನೆ:

ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 36, 64 ಬಿ ಮತ್ತು 64 ಜಡ್‌ಡಿ ರಲ್ಲಿ ಹಾಗೂ ***ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 29, 70 ಬಿ ಮತ್ತು 70 ಎಕ್ಸ್‌ಎಫ್*** ಗಳಂತೆ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂತಹ ನಮೂನೆಯಲ್ಲಿ ಇರತಕ್ಕದ್ದಾಗಿರುತ್ತದೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಪ್ರಕರಣ 38ಬಿ ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಪ್ರಕರಣ 55ಎ ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಯಂತ್ರಗಳನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಮತಯಂತ್ರಗಳಿಂದ ಚುನಾವಣೆ ನಡೆಸಲು ಚುನಾವಣೆ ನಿಯಮಗಳಲ್ಲಿ ಸೂಕ್ತ ನಿಯಮಗಳನ್ನು ರಚಿಸಲಾಗಿದೆ.

ಮೇಲೆ ಓದಲಾದ ಆದೇಶದಲ್ಲಿ ರಾಜ್ಯ ಚುನಾವಣಾ ***ಆಯೋಗವು ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್‌ಎ)*** ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನಗರಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ತನ್ನ ಮತವನ್ನು ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ತನ್ನ ಇಚ್ಛೆಯಂತೆ ಚಲಾಯಿಸಲು ಅನುವಾಗುವಂತೆ, ಮತಪತ್ರದಲ್ಲಿ / ಅಂಚೆ ಮತಪತ್ರದಲ್ಲಿ /ಇ.ವಿ.ಎಂ.ನಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೊನೆಯ ಸಾಲು ಅಥವಾ ಕೊನೆಯ ಪ್ಯಾನೆಲ್‌ನಲ್ಲಿ 'None of the Above' (NOTA) / **"ಮೇಲ್ಕಂಡ ಯಾರೂ ಅಲ್ಲ"** (ಮೇ ಯಾ ಅ) ಎಂದು ಮುದ್ರಿಸಿ, ಪ್ರತ್ಯೇಕ ಕಾಲಂ ನಲ್ಲಿ ಅವಕಾಶ ಕಲ್ಪಿಸಲು ಆದೇಶಿಸಿದೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಂದೇ ವಾರ್ಡಿನಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಸ್ಪರ್ಧಿಸುತ್ತಿರುವುದನ್ನು ಆಯೋಗವು ಗಮನಿಸಿದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯನ್ನು ಗುರುತಿಸಲು ಅನುಕೂಲವಾಗುವಂತೆ ಅವರ ಹೆಸರುಗಳ ಮುಂದೆ ಅವರ ವೃತ್ತಿ ಅಥವಾ ವಿಳಾಸ ಇತ್ಯಾದಿಗಳನ್ನು ತೋರಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಆದರೂ ಸಹ ಮತದಾನದ ಸಮಯದಲ್ಲಿ ಮತದಾರರಿಗೆ ಗೊಂದಲ ಉಂಟಾಗುವುದನ್ನು ತಪ್ಪಿಸಲು ಮತಪತ್ರಗಳಲ್ಲಿ ಅಭ್ಯರ್ಥಿಗಳ ಹೆಸರಿನ ಜೊತೆಗೆ ಅವರ ಭಾವಚಿತ್ರವನ್ನು ಮುದ್ರಿಸುವುದು ಸೂಕ್ತವೆಂದು ಆಯೋಗವು ಅಭಿಪ್ರಾಯಿಸಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮತಯಂತ್ರದಲ್ಲಿ (ಇ.ವಿ.ಎಂ) ಉಪಯೋಗಿಸುವ ಮತಪತ್ರವನ್ನು ಹಾಗೂ ಅಂಚೆ ಮತಪತ್ರವನ್ನು ತಯಾರಿಸುವ ಬಗ್ಗೆ ಸೂಚನೆಗಳನ್ನು ನೀಡುವುದು ಅವಶ್ಯವಾಗಿರುತ್ತದೆ. ಆದುದರಿಂದ ಈ ಆದೇಶ.

ಆದೇಶ ಸಂಖ್ಯೆ:ರಾಚುಆ 28 ಇಯುಬಿ 2018, ಬೆಂಗಳೂರು, ದಿನಾಂಕ:01.06.2018

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ***ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್‌ಎ)***ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಹಾಗೂ ***ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 36, 64 ಬಿ ಮತ್ತು 64 ಜಡ್‌ಡಿ*** ರಲ್ಲಿ ಹಾಗೂ ***ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 29, 70 ಬಿ ಮತ್ತು 70 ಎಕ್ಸ್‌ಎಫ್*** ಗಳಲ್ಲಿ ಪ್ರದತ್ತವಾದ ಅಧಿಕಾರದಂತೆ ರಾಜ್ಯ ಚುನಾವಣಾ ಆಯೋಗವು ವಿದ್ಯುನ್ಮಾನ ಮತಯಂತ್ರದಲ್ಲಿ (ಇ.ವಿ.ಎಂ) ಉಪಯೋಗಿಸುವ ಮತಪತ್ರವನ್ನು ಹಾಗೂ ಅಂಚೆ ಮತಪತ್ರವನ್ನು ತಯಾರಿಸುವ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ನೀಡಿದೆ:–

1. ವಿದ್ಯುನ್ಮಾನ ಮತಯಂತ್ರದಲ್ಲಿ (E.V.M.) ಉಪಯೋಗಿಸುವ ಮತಪತ್ರವನ್ನು ತಯಾರಿಸುವ ಬಗ್ಗೆ ಸೂಚನೆಗಳು:–

(i) ಭಾರತ್ ಎಲೆಕ್ಟಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರಕ್ಕೆ ಬಳಸುವ ಮತಪತ್ರವು 461.5 ಮಿ.ಮೀ. ಮತ್ತು ಅದರ ಅಗಲ 140 ಮಿ.ಮೀ ಇರತಕ್ಕದ್ದು.

(ii) ಮತಪತ್ರದ ಮೇಲ್ಭಾಗದಲ್ಲಿ ಚುನಾವಣೆ ಹಾಗೂ ಕ್ಷೇತ್ರದ ವಿವರಗಳನ್ನು ನಮೂದಿಸಲು 7.5 ಮಿ.ಮೀ x 140 ಮಿ.ಮೀ ರಷ್ಟು ಜಾಗ ಬಿಡತಕ್ಕದ್ದು.

(iii) ಮೇಲ್ಭಾಗದ ಎಡ ತುದಿಯಲ್ಲಿ ಖಾಲಿ ಬಿಟ್ಟಿರುವ ಜಾಗದಲ್ಲಿ ಮತಪತ್ರದ ಕ್ರಮ ಸಂಖ್ಯೆಯನ್ನು ಮುದ್ರಿಸತಕ್ಕದ್ದು. NOTA ಹೊರತುಪಡಿಸಿ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15 ಮೀರಿದ್ದಲ್ಲಿ ಮತಪತ್ರವನ್ನು ಒಂದಕ್ಕಿಂತ ಹೆಚ್ಚು ಹಾಳೆಗಳಲ್ಲಿ ಮುದ್ರಿಸಬೇಕಾಗಿರುವುದರಿಂದ ಹಾಳೆಯ ಸಂಖ್ಯೆಯನ್ನು ಮೇಲ್ಭಾಗದ ಬಲ ತುದಿಯಲ್ಲಿ ಮುದ್ರಿಸತಕ್ಕದ್ದು. ಮೇಲಿನ ಕ್ರಮ ಸಂಖ್ಯೆ (ii) ರಂತೆ ಖಾಲಿ ಬಿಡಲಾದ ಸ್ಥಳದಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸತಕ್ಕದ್ದು. ಚುನಾವಣೆಯ ವಿವರಗಳು ಎಂದರೆ, ವಾರ್ಡಿನ ಹೆಸರು ಮತ್ತು ಕ್ರಮ ಸಂಖ್ಯೆ, ಚುನಾವಣೆಯ ವರ್ಷ ಮತ್ತು ಯಾವ ಚುನಾವಣೆ ಎಂಬುದನ್ನು ಕನ್ನಡದಲ್ಲಿ ಮುದ್ರಿಸತಕ್ಕದ್ದು. ಈ ಕೆಳಕಂಡ ಸೂಚನೆಗಳು ಅದನ್ನು ಸ್ಪಷ್ಟಪಡಿಸುತ್ತದೆ:–

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಾಗಿ:

(1) ಪಟ್ಟಣ ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದಂತೆ

ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ / ಉಪ ಚುನಾವಣೆ

(2) ಪುರಸಭೆ ಚುನಾವಣೆಗೆ ಸಂಬಂಧಿಸಿದಂತೆ

ವಾರ್ಡ್ ಸಂ. – / –– ಪುರಸಭೆ 2018. ಸಾರ್ವತ್ರಿಕ / ಉಪ ಚುನಾವಣೆ

(3) ನಗರಸಭೆ ಚುನಾವಣೆಗೆ ಸಂಬಂಧಿಸಿದಂತೆ

ವಾರ್ಡ್ ಸಂ. – / – – –ನಗರಸಭೆ 2018. ಸಾರ್ವತ್ರಿಕ / ಉಪ ಚುನಾವಣೆ

(4) ಮಹಾನಗರ ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ

ವಾರ್ಡ್ ಸಂ. – / – – –ಮ.ನ.ಪಾಲಿಕೆ 2018. ಸಾರ್ವತ್ರಿಕ / **ಉಪ ಚುನಾವಣೆ**

ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು ಹದಿನೈದಕ್ಕಿಂತ ಕಡಿಮೆ ಇದ್ದಲ್ಲಿ ಮೇಲಿನ ವಿವರಗಳನ್ನು ಮುದ್ರಣಕ್ಕೆ ಅನುಕೂಲವಾಗುವಂತೆ ಮತಪತ್ರದ ಮೇಲ್ಭಾಗದಲ್ಲಿ ಅಥವಾ ಕೆಳ ಭಾಗದಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು ಹದಿನೈದು ಹಾಗೂ ಅದಕ್ಕಿಂತ ಹೆಚ್ಚಾಗಿದ್ದಲ್ಲಿ, ಮತಪತ್ರದ ಎಡಭಾಗದಲ್ಲಿ ಅಡ್ಡವಾಗಿ ಮುದ್ರಿಸುವುದು ಹಾಗೂ ಹಾಗೆ ಮುದ್ರಿಸುವಾಗ ಕ್ರಮ ಸಂಖ್ಯೆ ಪಕ್ಕದಲ್ಲಿ ಒಂದು ದಪ್ಪಗೆರೆಯಿಂದ ಬೇರ್ಪಡಿಸತಕ್ಕದ್ದು.

(iv) ಭಾರತ್ ಎಲೆಕ್ಟಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರದಲ್ಲಿ ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದ ಅಂಕಣವು (Panel) 27.5 ಮಿ.ಮೀ (ಉದ್ದ) x 140 ಮಿ.ಮೀ (ಅಗಲ) ಇರತಕ್ಕದ್ದು. ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರತಿ ಅಂಕಣದ ಮಧ್ಯದಲ್ಲಿ 1 ಮಿ.ಮೀ ಅಗಲದ ಕಪ್ಪು ಬಣ್ಣದ ದಪ್ಪ ರೇಖೆ ಇರತಕ್ಕದ್ದು.

(v) ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ (ಪ್ರಪತ್ರ–7) ರಲ್ಲಿ ಕಾಣಿಸಿರುವಂತಹ ಕ್ರಮದಲ್ಲಿಯೇ ಮತಪತ್ರದ ಮೇಲೆ ಮುದ್ರಿಸತಕ್ಕದ್ದು.

(vi) **ಮತಪತ್ರದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಅಂಕಣ ಮುದ್ರಿಸುವುದು:** ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ **ರಾಚುಆ:14:ಇಯುಬಿ:2017, ದಿನಾಂಕ:10–03–2017** ರಂತೆ ಮತಪತ್ರದಲ್ಲಿ "NOTA" ಅವಕಾಶ ಕಲ್ಪಿಸಲು ಆದೇಶವಾಗಿರುವುದರಿಂದ, ಭಾರತ್ ಎಲೆಕ್ಟಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರ ಬಳಸುವಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸಲು ಮತಪತ್ರದ ಮೇಲ್ಭಾಗದಲ್ಲಿ ಬಿಟ್ಟಿರುವ ಸ್ಥಳದ ಕೆಳಗೆ ಒಂದು ಮಿ.ಮೀ ಅಗಲದ ಕಪ್ಪು ರೇಖೆ ಇರತಕ್ಕದ್ದು. ಆ ರೇಖೆಯ ಕೆಳಗೆ ಪ್ರತಿ ಅಭ್ಯರ್ಥಿಗೆ ಇರುವ **ಪ್ರತ್ಯೇಕ**

ಅಂಕಣದಲ್ಲಿ (Panel) ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಸಂಬಂಧಿಸಿದ ಚಿಹ್ನೆಯನ್ನು ಮುದ್ರಿಸತಕ್ಕದ್ದು. ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ಇರುವ ಅಂಕಣದ ನಂತರ ಮತ್ತೊಂದು ಅಂಕಣದಲ್ಲಿ **"ಮೇಲ್ಕಂಡ ಯಾರೂ ಅಲ್ಲ"** (NOTA) ಇರತಕ್ಕದ್ದು. ಅದರ ಎದುರಿಗೆ ಈ ಕೆಳಕಂಡಂತೆ ಚಿಹ್ನೆಯನ್ನು ಮುದ್ರಿಸತಕ್ಕದ್ದು.



The NOTA symbol

(vii) ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಮತಪತ್ರದಲ್ಲಿ ಒಂದರ ನಂತರ ಒಂದನ್ನು ಅನುಕ್ರಮವಾಗಿ ಮುದ್ರಿಸಿ ಕೊನೆಯ ಅಂಕಣದಲ್ಲಿ **"ಮೇಲ್ಕಂಡ ಯಾರೂ ಅಲ್ಲ"** (NOTA) ವನ್ನು ಚಿಹ್ನೆಯ ಸಹಿತ ಮುದ್ರಿಸುವುದು. NOTA ಅಂಕಣ ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಅಂಕಣಗಳ ಸಂಖ್ಯೆಯು 16 ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. (ಮೇಲೆ iii ರಲ್ಲಿ ತಿಳಿಸಿದಂತೆ ಚುನಾವಣಾ ವಿವರಗಳನ್ನು ಮತಪತ್ರದ ಕೆಳಭಾಗದಲ್ಲಿ ಮುದ್ರಿಸತಕ್ಕದ್ದು) NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 32ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. ಅದೇ ರೀತಿ ಮೂರು ಮತ್ತು ನಾಲ್ಕು ಹಾಳೆಗಳಿರುವ ಮತಪತ್ರಗಳಿಗೂ ಅನುಸರಿಸತಕ್ಕದ್ದು.

(viii) ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15ನ್ನು ಮೀರಿದಲ್ಲಿ, ಮೇಲೆ ತಿಳಿಸಿರುವ ಅಳತೆಯಲ್ಲಿ ಮತಪತ್ರವನ್ನು 2 ಹಾಳೆಗಳಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 31ನ್ನು ಮೀರಿದಲ್ಲಿ, 3 ಹಾಳೆಗಳಲ್ಲಿ ಮುದ್ರಿಸತಕ್ಕದ್ದು ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 47ನ್ನು ಮೀರಿದಲ್ಲಿ, ಮತಪತ್ರವನ್ನು 4 ಹಾಳೆಗಳಲ್ಲಿ ಮುದ್ರಿಸತಕ್ಕದು.

(ix) ಅಂತಹ ಪ್ರತಿ ಹಾಳೆಗಳಲ್ಲಿ, ಚುನಾವಣೆಯ ವಿವರಗಳನ್ನು ತೋರಿಸಲು ಇರುವ ಜಾಗದಲ್ಲಿ ಹಾಳೆಯ ಸಂಖ್ಯೆಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸತಕ್ಕದ್ದು.

(x) NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ (Form-7)ರುವ ಕ್ರಮದಂತೆಯೇ, ಅದೇ ಭಾಷೆಯಲ್ಲಿಯೇ ಮುದ್ರಿಸತಕ್ಕದ್ದು. ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಇಂಗ್ಲೀಷ್ ಸಂಖ್ಯೆಯಲ್ಲಿ ಮುದ್ರಿಸತಕ್ಕದ್ದು.

(xi) **ಮತಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಮುದ್ರಿಸುವುದು:** ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ ಮತ್ತು ಹೆಸರನ್ನು ಎಡ ಭಾಗದಲ್ಲಿ ಹಾಗೂ ಅಭ್ಯರ್ಥಿಯ ಚಿಹ್ನೆಯನ್ನು ಬಲ ಭಾಗದಲ್ಲಿ ಅವರಿಗೆ ಸಂಬಂಧಿಸಿದ ಅಂಕಣದಲ್ಲಿ ಮುದ್ರಿಸತಕ್ಕದ್ದು. ಅಭ್ಯರ್ಥಿಯ ಹೆಸರು ಮತ್ತು ಅಭ್ಯರ್ಥಿಯ ಚಿಹ್ನೆಯ ನಡುವೆ ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರವನ್ನು ಮುದ್ರಿಸುವುದು.

ಚುನಾವಣೆಗೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತಿ ಚುನಾವಣೆಗೆ ನಾಮಪತ್ರದೊಂದಿಗೆ ಈ ಕೆಳಕಂಡಂತೆ ನಿರ್ದಿಷ್ಟ ವಿವರವುಳ್ಳ ತಮ್ಮ ಭಾವಚಿತ್ರ (Specifications for the Photograph) ವನ್ನು ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ನಾಮಪತ್ರದ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸಿರಬೇಕು. ಭಾವಚಿತ್ರದ ಹಿಂಬದಿಯಲ್ಲಿ ಅಭ್ಯರ್ಥಿಯು ರುಜು ಮಾಡಿರಬೇಕು. ಭಾವಚಿತ್ರವನ್ನು ಪಡೆಯುವ ಸಂದರ್ಭದಲ್ಲಿ ಅಭ್ಯರ್ಥಿ / ಸೂಚಕ ಅಥವಾ ಅವನ ಚುನಾವಣಾ ಏಜೆಂಟನಿಂದ ಸದರಿ ಅಭ್ಯರ್ಥಿಯ ಭಾವಚಿತ್ರವು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿರುವುದೆಂಬ ಬಗ್ಗೆ ಘೋಷಣೆಯನ್ನು ಪಡೆಯತಕ್ಕದ್ದು. ಘೋಷಣೆಯ ನಮೂನೆ(ಮಾದರಿ)ಯನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಭಾವಚಿತ್ರವು ಈ ಕೆಳಕಂಡ ನಿರ್ದಿಷ್ಟ ವಿವರಗಳಿಗೆ (Specifications for the Photograph) ಒಳಗೊಂಡಂತಿರಬೇಕು:

1) ಇತ್ತೀಚಿನ, ಅಂದರೆ ಚುನಾವಣೆ ಅಧಿಸೂಚನೆ ಹೊರಡಿಸಿದ ದಿನಾಂಕದ 3 (ಮೂರು) ತಿಂಗಳುಗಳ ಹಿಂದೆ ತೆಗೆಸಲಾದ ಭಾವಚಿತ್ರವನ್ನು ಸಲ್ಲಿಸಬೇಕು;

2) ಭಾವಚಿತ್ರವು ಅಂಚೆ ಸ್ಟಾಂಪ್ ಅಳತೆಯ 2cm X 2.5cm (2cm ಅಗಲ ಮತ್ತು 2.5cm ಎತ್ತರ)ದ್ದಾಗಿರಬೇಕು. ಹಿನ್ನೆಲೆ ಬಿಳಿ ಬಣ್ಣದ್ದಾಗಿದ್ದು, ಮುಖವು ಪೂರ್ಣವಾಗಿ ಕಾಣುವಂತಿದ್ದು, ನೇರವಾಗಿ ನೋಡುವಂತಿರಬೇಕು. ಭಾವಚಿತ್ರವು ಕಪ್ಪು – ಬಿಳುಪು ಅಥವಾ ಬಣ್ಣದ್ದಾಗಿರಬಹುದು; ಹಾಗೂ

3) ಭಾವಚಿತ್ರದಲ್ಲಿ ಧರಿಸಿರುವ ಬಟ್ಟೆ ಯೂನಿಫಾರಂ ಆಗಿರದೇ ಸಾಮಾನ್ಯವಾಗಿರತಕ್ಕದ್ದು, ಕಪ್ಪು ಕನ್ನಡಕ ತಲೆಗೆ ಹ್ಯಾಟ್ ಅಥವಾ ಟೋಪಿ ಧರಿಸಿರಬಾರದು.

(xii) ಮತದಾರನು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಮತ ನೀಡದೇ ತನ್ನ ಇಚ್ಛೆಯಂತೆ **"ಮೇಲ್ಕಂಡ ಯಾರೂ ಅಲ್ಲ"** (NOTA)ಗೆ ಮತ ಹಾಕಲು ಅನುವಾಗುವಂತೆ ಸ್ಪರ್ಧಿಸುತ್ತಿರುವ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯನ್ನು ಒಳಗೊಂಡ ಅಂಕಣದ ನಂತರ ಪ್ರತ್ಯೇಕ ಅಂಕಣ ಇರತಕ್ಕದ್ದು. **"ಮೇಲ್ಕಂಡ ಯಾರೂ ಅಲ್ಲ"** ಈ ಪದಗಳು ಅಭ್ಯರ್ಥಿಗಳ ಹೆಸರನ್ನು ಯಾವ ಭಾಷೆಯಲ್ಲಿ ಮುದ್ರಿಸಲಾಗಿದೆಯೋ ಅದೇ ಭಾಷೆಯಲ್ಲಿ ಇರತಕ್ಕದ್ದು.

(xiii) ರಾಜ್ಯ ಚುನಾವಣಾ ಆಯೋಗದ ವಿಶೇಷ ಆದೇಶ / ನಿರ್ದೇಶನವನ್ನು ಹೊರತುಪಡಿಸಿ ಮತಪತ್ರವು ಬಿಳಿ ಬಣ್ಣದಲ್ಲಿ ಇರತಕ್ಕದ್ದು.

(xiv) ಮತಪತ್ರದ ನಮೂನೆ (ಮಾದರಿ) ಯನ್ನು **ಅನುಬಂಧ–1**ರಲ್ಲಿ ತೋರಿಸಲಾಗಿದೆ.

2. ಮತಪತ್ರಗಳನ್ನು ಮುದ್ರಿಸುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು:

ವಿದ್ಯುನ್ಮಾನ ಮತಯಂತ್ರದಲ್ಲಿ ಮತಪತ್ರಕ್ಕೆ ಮೀಸಲಾದ ಜಾಗದಲ್ಲಿ ಮತಪತ್ರವನ್ನು ಸೇರಿಸುವಾಗ ಚುನಾವಣೆಯ ವಿವರಗಳನ್ನು ಒಳಗೊಂಡ ಅಂಕಣದ ಕೆಳಗಿನ ರೇಖೆ ಹಾಗೂ ಅಭ್ಯರ್ಥಿಗಳ ಹೆಸರುಗಳನ್ನೊಳಗೊಂಡ ಅಂಕಣಗಳ ನಡುವಿನ ರೇಖೆಗಳು ಬ್ಯಾಲೆಟ್ ಯೂನಿಟ್‌ನ ಮೇಲಿರುವ ಗೆರೆಗಳಿಗೆ ಸರಿಹೊಂದುವಂತೆ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆದ್ದರಿಂದ, ಮತಪತ್ರಗಳನ್ನು ಮುದ್ರಿಸುವಾಗ ಬಹಳ ಮುನ್ನೆಚ್ಚರಿಕೆ ವಹಿಸತಕ್ಕದ್ದು. ಮುದ್ರಣಾಲಯದ ತಾಂತ್ರಿಕ ಸಿಬ್ಬಂದಿಗೆ ಬ್ಯಾಲೆಟ್ ಯೂನಿಟ್‌ನ್ನು ತೋರಿಸುವುದರಿಂದ ಅವರು ಮತಪತ್ರವನ್ನು ಮುದ್ರಿಸುವಾಗ ಚುನಾವಣೆಯ ವಿವರಗಳನ್ನೊಳಗೊಂಡ ಜಾಗದ ಅಳತೆ ಹಾಗೂ ಅಭ್ಯರ್ಥಿಗಳ ಅಂಕಣದ ಅಳತೆ ಮತ್ತು ಅವುಗಳನ್ನು ಬೇರ್ಪಡಿಸುವ ರೇಖೆಗಳ ಅಳತೆಗಳನ್ನು ತೆಗೆದುಕೊಂಡು ಬ್ಯಾಲೆಟ್ ಯೂನಿಟ್‌ಗೆ ಸೂಕ್ತವಾಗಿ ಕೂಡುವಂತೆ ಮತಪತ್ರವನ್ನು ಮುದ್ರಿಸಲು ಸಾಧ್ಯವಾಗುವುದು.

ಬ್ಯಾಲೆಟ್ ಯೂನಿಟ್‌ಗೆ ಸೇರಿಸುವ ಮತಪತ್ರಗಳನ್ನು ಕಟ್ಟುಗಳನ್ನಾಗಿ ಹೊಲಿಯುವ ಅವಶ್ಯಕತೆ ಇರುವುದಿಲ್ಲ.

3. ಟೆಂಡರ್ಡ್ ಮತಪತ್ರಗಳು: (ನೀಡಿದ ಮತಪತ್ರಗಳು)

ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು, 1977ರ ನಿಯಮ 47ರಂತೆ, ತಾನೇ ನಿರ್ದಿಷ್ಟ ಮತದಾರನೆಂದು ಹೇಳಿಕೊಳ್ಳುವ ವ್ಯಕ್ತಿಯು ಅಂತಹ ಮತದಾರನೆಂದು ಈಗಾಗಲೇ ಇನ್ನೊಬ್ಬ ವ್ಯಕ್ತಿಯು ಮತ ನೀಡಿದ ತರುವಾಯ ಬಂದು ಮತಪತ್ರಕ್ಕಾಗಿ ಕೇಳಿಕೊಂಡರೆ, ಪ್ರಿಸೈಡಿಂಗ್ ಅಧಿಕಾರಿಯು ಅವನ ಗುರುತಿನ ಬಗ್ಗೆ ಕೇಳಬಹುದಾದಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟ ಮೇಲೆ ಅವನಿಗೆ ವಿದ್ಯುನ್ಮಾನ ಮತಯಂತ್ರದಲ್ಲಿ ಮತದಾನ ಮಾಡಲು ಅವಕಾಶ ನೀಡದೇ ಅದರ ಬದಲಾಗಿ **"ನೀಡಿದ ಮತಪತ್ರ"** (Tendered Ballot Paper)" ಅನ್ನು ಕೊಡತಕ್ಕದ್ದು. ಅಂತಹ **"ನೀಡಿದ ಮತಪತ್ರದ"** ವಿನ್ಯಾಸ ಮತ್ತು ವಿವರಗಳು ಬ್ಯಾಲೆಟ್ ಯೂನಿಟ್‌ಗೆ ಅಳವಡಿಸಿದ ಮತಪತ್ರದಂತೆಯೇ ಇರತಕ್ಕದ್ದು. ಅಂತಹ ನೀಡಿದ ಮತಪತ್ರದ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು **"ನೀಡಿದ ಮತಪತ್ರ (Tendered Ballot Paper)"** ಎಂಬ ಸೀಲನ್ನು ಹಾಕುವುದು ಅಥವಾ ಆ ಪದಗಳನ್ನು ಕೈನಲ್ಲಿ ಬರೆದು ರುಜುವಿನೊಂದಿಗೆ ಹಿಂಬರಹ ಮಾಡತಕ್ಕದ್ದು. ಅಂತಹ **"ನೀಡಿದ ಮತಪತ್ರ"** ವನ್ನು ಮತದಾರನು ಮತ ಹಾಕಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು. ಅವರು ಅದನ್ನು ಆ ಉದ್ದೇಶಕ್ಕಾಗಿ ವಿಶೇಷವಾಗಿ ಇಡಲಾದ ಲಕೋಟೆಯಲ್ಲಿ ಇರಿಸತಕ್ಕದ್ದು. ಪೌರಸಭೆಗಳಿಗೆ (ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರಸಭೆ) ಪ್ರಪತ್ರ 19ಬಿ ರಲ್ಲಿ ಹಾಗೂ ಪೌರನಿಗಮಗಳಿಗೆ (ಮಹಾನಗರ ಪಾಲಿಕೆ ಮತ್ತು ಬಿ.ಬಿ.ಎಂ.ಪಿ) ಪ್ರಪತ್ರ 19ಎ ರಲ್ಲಿ ದಾಖಲಿಸಿ ಸಹಿ ಪಡೆಯುವುದು.

4. ಮತಪತ್ರಗಳ ಅಗತ್ಯತೆಯನ್ನು ಲೆಕ್ಕ ಹಾಕುವುದು:

ಎಷ್ಟು ಮತಗಟ್ಟೆಗಳು ಇರುತ್ತವೆ, ಎಷ್ಟು ವಿದ್ಯುನ್ಮಾನ ಯಂತ್ರಗಳನ್ನು (ಮೀಸಲು ಯಂತ್ರಗಳು ಸೇರಿ) ಉಪಯೋಗಿಸಲು ಅಂದಾಜಿಸಲಾಗಿದೆ ಮತ್ತು ಪ್ರತಿ ಮತಗಟ್ಟೆಗೆ ಎಷ್ಟು **"ನೀಡಿದ ಮತಪತ್ರ (Tendered Ballot Paper)"**ಗಳನ್ನು ನೀಡಬೇಕಾಗುತ್ತದೆ ಎಂಬುದರ ಮೇಲೆ ಮುದ್ರಿಸಬೇಕಾದ ಮತಪತ್ರಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು. ಎಷ್ಟು ಮತಪತ್ರಗಳನ್ನು ಮುದ್ರಿಸುವ ಅವಶ್ಯಕತೆ ಇದೆ ಎಂಬುದನ್ನು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು:

(ಅ) ಪ್ರತಿ ಬ್ಯಾಲೆಟ್ ಯೂನಿಟ್ ಮೇಲೆ ಅಳವಡಿಸಲು ಒಂದು ಮತಪತ್ರವು ಬೇಕಾಗುತ್ತದೆ. ಆದ್ದರಿಂದ, ಕ್ಷೇತ್ರದ ವ್ಯಾಪ್ತಿಯಲ್ಲಿ ಉಪಯೋಗಿಸಲಾಗುವ ವಿದ್ಯುನ್ಮಾನ ಮತಯಂತ್ರಗಳ ಸಂಖ್ಯೆಗೆ (ಮೀಸಲು ಯಂತ್ರಗಳು ಸೇರಿ) ಸಮನಾಗಿ ಮತಪತ್ರಗಳ ಅವಶ್ಯಕತೆ ಇರುತ್ತದೆ.

(ಅ) ಪ್ರತಿ ಮತಗಟ್ಟೆಗೆ ಇಪ್ಪತ್ತು ಮತಪತ್ರಗಳನ್ನು "ನೀಡಿದ ಮತಪತ್ರ (Tendered Ballot Paper)" ಗಳಾಗಿ ಉಪಯೋಗಿಸಲು ಒದಗಿಸತಕ್ಕದ್ದು. ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮತಗಟ್ಟೆಗಳ ಸಂಖ್ಯೆಯ ಆಧಾರದ ಮೇಲೆ ಎಷ್ಟು "ನೀಡಿದ ಮತಪತ್ರ (Tendered Ballot Paper)" ಗಳನ್ನು ಒದಗಿಸಬೇಕು ಎಂದು ನಿರ್ಧರಿಸತಕ್ಕದ್ದು.

(ಇ) ಮತಪತ್ರವನ್ನು ಬ್ಯಾಲೆಟ್ ಯೂನಿಟ್‌ಗೆ ಅಳವಡಿಸುವಾಗ ಹಾಳಾಗುವ ಸಾಧ್ಯತೆ ಇರುವುದರಿಂದ ಮತ್ತು ಕೆಲವು ಮತಗಟ್ಟೆಗಳಿಗೆ ಹೆಚ್ಚಿನ "ನೀಡಿದ ಮತಪತ್ರ" (Tendered Ballot Paper) ನೀಡಬೇಕಾದ ಅವಶ್ಯಕತೆ ಇತ್ಯಾದಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೇಲಿನ ಕಂಡಿಕೆ (ಅ) ಮತ್ತು (ಆ) ರಲ್ಲಿ ಲೆಕ್ಕ ಹಾಕಿದ ಮತಪತ್ರಗಳ ಹೊರತಾಗಿ **ಶೇಕಡ 10** ರಷ್ಟು ಹೆಚ್ಚಿನ ಮತಪತ್ರಗಳನ್ನು ಮುದ್ರಿಸತಕ್ಕದ್ದು.

5. ಅಂಚೆ ಮತಪತ್ರ:

ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 35 ಮತ್ತು 36 ಹಾಗೂ ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 41ಎ ಮತ್ತು 41ಬಿ ರಂತೆ ಅಂಚೆ ಮತಪತ್ರವನ್ನು ನೀಡಬೇಕಾಗಿದ್ದು ಅಂಚೆ ಮತಪತ್ರದ ನಮೂನೆ (ಮಾದರಿ) ಯನ್ನು ಅನುಬಂಧ–1ಎ ರಲ್ಲಿ ಒದಗಿಸಲಾಗಿದೆ.

6. ಮತಪತ್ರಗಳ ಪರಿಶೀಲನೆ:

ಮತಪತ್ರ ಮುದ್ರಿಸುವ ಸಂದರ್ಭದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆ ಸರಿಯಾಗಿ ಮುದ್ರಿತವಾಗಿದೆಯೇ ಎಂಬ ಬಗ್ಗೆ ಮುದ್ರಣಾಲಯದಲ್ಲಿ ಖಚಿತಪಡಿಸಿಕೊಳ್ಳಲು ವಿಶೇಷ ವ್ಯವಸ್ಥೆಯನ್ನು ಮಾಡತಕ್ಕದ್ದು. ಚಿಹ್ನೆಯ ಗುರುತುಗಳು ಈಗಾಗಲೇ ಅನುಮೋದಿಸಿರುವಂತೆ ಇರುತ್ತವೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು.

ಮುದ್ರಣಾಲಯದಿಂದ ಮುದ್ರಿತ ಮತಪತ್ರಗಳು ಸ್ವೀಕೃತವಾದ ಕೂಡಲೇ ಮುದ್ರಣಾಲಯದವರು ಸರಬರಾಜು ಮಾಡಿದ ಮತಪತ್ರಗಳ ಸಂಖ್ಯೆ ಹಾಗೂ ವಾಸ್ತವವಾಗಿ ಸ್ವೀಕರಿಸಲಾದ ಮತಪತ್ರಗಳ ಸಂಖ್ಯೆಯನ್ನು ಹಾಗೂ ಮತಪತ್ರದಲ್ಲಿ ಏನಾದರೂ ಲೋಪದೋಷಗಳಿವೆಯೇ ಎಂದು ಪರಿಶೀಲಿಸಬೇಕು. ಪರಿಶೀಲನೆಯ ನಂತರ ಲೋಪದೋಷವಿರುವ / ಮತಪತ್ರದಲ್ಲಿ ಮತಪತ್ರದ ಕ್ರಮ ಸಂಖ್ಯೆ ತಪ್ಪಾಗಿರುವ / ಮುದ್ರಿತವಾಗದೇ ಇರುವ / ಅದೇ ಸಂಖ್ಯೆಗಳು ಪುನರಾವರ್ತನೆಯಾಗಿರುವ ಮತಪತ್ರಗಳನ್ನು ಪ್ರತ್ಯೇಕಿಸಿ, ಅವುಗಳನ್ನು ಸೀಲ್ ಮಾಡಿ, ಅವುಗಳ ವಿವರಗಳನ್ನು ಸಂಬಂಧಿಸಿದ ರಿಜಿಸ್ಟರ್‌ನಲ್ಲಿ ನಮೂದು ಮಾಡಿಕೊಳ್ಳತಕ್ಕದ್ದು ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವಿತರಣಾ ಕೇಂದ್ರದಲ್ಲಿ ಆ ಬಗ್ಗೆ ಪ್ರಕಟಿಸಬೇಕು. ಅವಶ್ಯವಿದ್ದಲ್ಲಿ ಪ್ರಕಟಿತ ನೋಟೀಸನ್ನು ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೂ ಕಳುಹಿಸಬೇಕು.

7. ವಿತರಣೆಯಾಗದೆ ಉಳಿದ ಮತಪತ್ರಗಳ ಅಭಿರಕ್ಷೆ:

ವಿದ್ಯುನ್ಮಾನ ಮತಯಂತ್ರದ ಬ್ಯಾಲೆಟಿಂಗ್ ಯುನಿಟ್‌ಗೆ ಮತಪತ್ರವನ್ನು ಅಳವಡಿಸಿದ ನಂತರ ಹಾಗೂ ಮತಗಟ್ಟೆಗಳಿಗೆ "ನೀಡಿದ ಮತಪತ್ರ" (Tendered Ballot Paper) ಸರಬರಾಜು ಮಾಡಿದ ನಂತರ ಹಂಚಿಕೆಯಾಗದೇ ಮತಪತ್ರಗಳು ಬಾಕಿ ಉಳಿಯಬಹುದು. ಅಂತಹ ಹಂಚಿಕೆಯಾಗದೆ ಬಾಕಿ ಉಳಿದ ಮತಪತ್ರಗಳನ್ನು ಚುನಾವಣೆಯ ದಿನ ಸಂದರ್ಭಾನುಸಾರವಾಗಿ ಯಾವುದಾದರೂ ಮತಗಟ್ಟೆಗೆ ಸರಬರಾಜು ಮಾಡುವುದಕ್ಕಾಗಿ ಒಂದು ಕೇಂದ್ರ ಸ್ಥಳದಲ್ಲಿಡತಕ್ಕದ್ದು. ಅಂತಹ ಹಂಚಿಕೆ ಮಾಡಲಾಗದ ಬಾಕಿ ಉಳಿದ ಮತಪತ್ರಗಳು ಅನಧಿಕೃತ ವ್ಯಕ್ತಿಗಳ ಕೈಗೆ ಸಿಗದಂತೆ ನೋಡಿಕೊಳ್ಳತಕ್ಕದ್ದು. ಅವುಗಳನ್ನು ಚುನಾವಣಾಧಿಕಾರಿಯ ಅಧೀನದಲ್ಲಿ ಅಥವಾ ಚುನಾವಣಾಧಿಕಾರಿಯು ನಿರ್ದಿಷ್ಟವಾಗಿ ನಾಮನಿರ್ದೇಶಿಸಿದ ಸಹಾಯಕ ಚುನಾವಣಾಧಿಕಾರಿಯ ಅಧೀನದಲ್ಲಿ ಸುರಕ್ಷಿತವಾಗಿ ಇಡತಕ್ಕದ್ದು.

ಚುನಾವಣೆ ಮುಗಿದ ನಂತರ ಅಂತಹ ಹಂಚಿಕೆಯಾಗದೆ ಬಾಕಿ ಉಳಿದ ಹೆಚ್ಚುವರಿ ಮತಪತ್ರಗಳನ್ನು ಒಂದು ಸ್ಟೀಲ್ ಪೆಟ್ಟಿಗೆಯಲ್ಲಿ ಅಥವಾ ಡಬ್ಬದಲ್ಲಿ ಹಾಕಿ ತಹಶೀಲ್ದಾರ್‌ರವರ ಕಛೇರಿಗೆ ಖಜಾನೆಯಲ್ಲಿ ಇಡುವುದಕ್ಕಾಗಿ ಕಳುಹಿಸತಕ್ಕದ್ದು.

ಮೇಲ್ಕಂಡ ಸೂಚನೆಗಳು ಮುಂದಿನ ಎಲ್ಲಾ ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ ಮತ್ತು ಉಪ ಚುನಾವಣೆಗಳಿಗೆ ಜಾರಿಗೆ ಬರುತ್ತದೆ.

ಆದೇಶಾನುಸಾರ

ಅರ್ಚನ.ಎಂ.ಎಸ್
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

ಮಾದರಿ

ಕ್ರ. ಸಂ. 0001 ವಾರ್ಡ್ ಸಂಖ್ಯೆ : _____/ _____ ಮಹಾನಗರ ಪಾಲಿಕೆ/
ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಸಾರ್ವತ್ರಿಕ/ ಉಪಚುನಾವಣೆ–2018

1	ಅಶೋಕರೆಡ್ಡಿ. ಕೆ.ಎ	ಭಾವಚಿತ್ರ	
2	ಬಿ. ಆಂಜನೇಯರೆಡ್ಡಿ	ಭಾವಚಿತ್ರ	
3	ಮಹಮದ್ ನಾಸೀರ್	ಭಾವಚಿತ್ರ	
4	ಬಿ.ಪಿ.ವೆಂಕಟೇಶ್	ಭಾವಚಿತ್ರ	
5	ಪಿ.ಶ್ರೀನಿವಾಸ್	ಭಾವಚಿತ್ರ	
6	ಎನ್.ಸಂತೋಷ್	ಭಾವಚಿತ್ರ	
7	ಮೇಲ್ಕಂಡಯಾರೂಅಲ್ಲ		

ಅನುಬಂಧ – 1ಎ
ಮಾದರಿ ಅಂಚೆ ಮತಪತ್ರ

ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ / ಉಪ ಚುನಾವಣೆ

ಅಂಚೆ ಮತಪತ್ರ

ಮತದಾರರ ಪಟ್ಟಿಯ ಭಾಗ ಸಂಖ್ಯೆ : 73
ಮತದಾರನ ಕ್ರಮ ಸಂಖ್ಯೆ : 205

ಕ್ರಮ ಸಂಖ್ಯೆ : **0003**

ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ /ಉಪ ಚುನಾವಣೆ

ಅಂಚೆ ಮತಪತ್ರ

ಕ್ರಮಸಂಖ್ಯೆ :**0003**

ಅರವಿಂದ (ಪಕ್ಷದ ಹೆಸರು)	ಭಾವಚಿತ್ರ
ಗಣೇಶಮೂರ್ತಿ (ಪಕ್ಷದ ಹೆಸರು)	ಭಾವಚಿತ್ರ
ಭಾರತಿ (ಪಕ್ಷೇತರ)	ಭಾವಚಿತ್ರ
“ಮೇಲ್ಕಂಡ ಯಾರೂ ಅಲ್ಲ” (NOTA)	

ಅನುಬಂಧ – 2

ಅಭ್ಯರ್ಥಿಯ ಭಾವಚಿತ್ರವನ್ನು ಅಭ್ಯರ್ಥಿ / ಅಭ್ಯರ್ಥಿಯ ಏಜೆಂಟ್ / ಸೂಚಕ ಸಲ್ಲಿಸುವಾಗ ಮಾಡಬೇಕಾದ ಘೋಷಣೆ

ವಿಷಯ: ..... ಮಹಾನಗರ ಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ವಾರ್ಡ್ ನಂ. .....ಕ್ಕೆ ಸಾರ್ವತ್ರಿಕ ಚುನಾವಣೆ / ಉಪ ಚುನಾವಣೆ

–:–:–:–

ಶ್ರೀ / ಶ್ರೀಮತಿ ....., ಬಿನ್ / ಕೋಂ ಶ್ರೀ / ಶ್ರೀಮತಿ ....., (ವಿಳಾಸ) ಆದ ನಾನು ....., ನಗರ ಪಾಲಿಕೆ / ನಗರಸಭೆ / ಪರಸಭೆ / ಪಟ್ಟಣ ಪಂಚಾಯಿತಿಯ ....., ವಾರ್ಡ್‌ನ ಅಭ್ಯರ್ಥಿಯಾಗಿದ್ದು, ಇದರೊಂದಿಗೆ ನನ್ನ ಭಾವಚಿತ್ರವನ್ನು ಮತಪತ್ರದಲ್ಲಿ ಮುದ್ರಿಸುವುದಕ್ಕಾಗಿ ಸಲ್ಲಿಸುತ್ತಿದ್ದೇನೆ. ಇದನ್ನು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ.

(ಇದನ್ನು ಅಭ್ಯರ್ಥಿಯೇ ಭಾವಚಿತ್ರ ಸಲ್ಲಿಸುತ್ತಿದ್ದಲ್ಲಿ, ಭರ್ತಿ ಮಾಡುವುದು)

ಅಥವಾ

ಶ್ರೀ / ಶ್ರೀಮತಿ ....., ಚುನಾವಣಾ ಏಜೆಂಟ್ / ಸೂಚಕನಾದ ನಾನು ಶ್ರೀ / ಶ್ರೀಮತಿ ....., ಬಿನ್ / ಕೋಂ ....., (ಅಭ್ಯರ್ಥಿ ಹೆಸರು / ವಿಳಾಸ) ರವರು ಮೇಲ್ಕಂಡ ಚುನಾವಣಾ ಅಭ್ಯರ್ಥಿಯಾಗಿದ್ದು ಇದರೊಟ್ಟಿಗೆ ಸದರಿ ಅಭ್ಯರ್ಥಿಯ ಭಾವಚಿತ್ರವನ್ನು ಮತಪತ್ರದಲ್ಲಿ ಮುದ್ರಿಸಲು ಸಲ್ಲಿಸುತ್ತಿದ್ದೇನೆ. ಈ ಭಾವಚಿತ್ರವು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿರುವುದೆಂದು ಈ ಮೂಲಕ ಘೋಷಿಸುತ್ತೇನೆ.

(ಇದನ್ನು ಚುನಾವಣಾ ಏಜೆಂಟ್ / ಸೂಚಕರು ಅಭ್ಯರ್ಥಿಯ ಭಾವಚಿತ್ರ ಸಲ್ಲಿಸುತ್ತಿದ್ದಲ್ಲಿ, ಭರ್ತಿ ಮಾಡಬೇಕು)

ದಿನಾಂಕ:

ಹೆಸರು :
ವಿಳಾಸ :
ದೂರವಾಣಿ ಸಂಖ್ಯೆ :

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 25

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಜೂನ್ ೪, ೨೦೧೮ (ಜ್ಯೇಷ್ಠ ೧೪, ಶಕ ವರ್ಷ ೧೯೪೦)	ನಂ. ೮೪೯
Part–I	**Bengaluru, Monday, June 4, 2018 (Jyeshta 14, Shaka Varsha 1940)**	**No. 849**

PROCEEDINGS OF THE ADDITIONAL DISTRICT MAGISTRATE AND COMMISSIONER OF POLICE, BENGALURU CITY

PRESENT: T.Suneel Kumar, IPS, Commissioner of Police, Bengaluru City

READ : 1] Election Commission of India Notification No.492/KT-LA/2018, Dated: 18-05-2018.
2] Election Commission of India letter No.576/14/EPS/2018/30, Dated: 23.05.2018.

PREAMBLE :

WHEREAS the Election Commission of India has adjourned the date of poll in the Jayanagar Assembly Constituency scheduled on 12.05.2018 (Saturday) and has directed that the poll in the said constituency shall now be held on 11.06.2018 (Monday) in the limits of **Jaya Nagar, J.P.Nagar, Siddapura, Puttena Halli, Thilak Nagara, Suddagunte Palya Police Stations** and **counting will be held on 13.06.2018(Wednesaday).**

WHEREAS anti-social elements are likely to take advantage of the situation after consumption of liquor indulging in acts of violence and disrupt free, fair and peaceful conduct of ensuing General Election to Jayanagar Assembly Constituency.

WHEREAS, I consider it absolutely necessary to maintain peace in the interest of free, fair, peaceful and smooth conduct of the polling in Bengaluru City.

WHEREAS the sale, consumption of liquor, wine, arrack or any other intoxicants are likely to lead to violence which will affect free, fair, peaceful and smooth conduct of the elections and also create Law and Order problem in Bengaluru City.

ORDER NO.20/ELN/2018 DATED: 01.06.2018

NOW THEREFORE, in exercise of the powers vested in me under sub-section (1) and (3) of Section 144 of the Criminal Procedure Code, I, T.Suneel Kumar, IPS, Commissioner of Police, Bengaluru City do hereby prohibit sale, consumption, procurement and storage of liquor, wine, arrack or any other intoxicant in any wholesale and retail outlets. Order that all liquor shops, wine shops, bars, Hotels, Restaurants, Tavern, shops or any other place, Public or Private situated in the limits of **Jaya Nagar, J.P.Nagar, Siddapura, Puttena Halli, Thilak Nagara, Suddagunte Palya Police Stations** Bengaluru City will remain closed during the dates specified below.

From 05-00 P.M on 09.06.2018 to 12-00 Midnight of 11.06.2018 and

From 06-00 A.M on 13.06.2018 to 12-00 midnight of 13.06.2018.

Given under my hand and seal of this 1st Day of June 2018.

T.Suneel Kumar, IPS
Commissioner of Police
Bengaluru City.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಬುಧವಾರ, ಜೂನ್ ೬, ೨೦೧೮ (ಜ್ಯೇಷ್ಠ ೧೬, ಶಕ ವರ್ಷ ೧೯೪೦)	ನಂ. ೮೫೧
Part–I	Bengaluru, Wednesday, June 6, 2018 (Jyeshta 16, Shaka Varsha 1940)	No. 851

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು: ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಜಯನಗರ ವಿಧಾನಸಭಾ ಕ್ಷೇತ್ರ–173 ರ ಚುನಾವಣೆಯ ಸಂಬಂಧ ಮತದಾನದ ಅವಧಿ ಮುಗಿಯುವ ಅವಧಿಯ ಹಿಂದಿನ 48 ಗಂಟೆಗಳು ಮತ್ತು ಮತದಾನ ಮುಗಿದ ನಂತರದ 24 ಗಂಟೆಗಳ ಅವಧಿಯಲ್ಲಿ ಸಿಆರ್‌ಪಿಸಿ ಕಲಂ.144 ರನ್ವಯ ಕಾನೂನು ಬಾಹಿರ ಗುಂಪುಗಾರಿಕೆ ಮತ್ತು ಸಾರ್ವಜನಿಕ ಸಭೆಯನ್ನು ನಡೆಸುವುದನ್ನು ಪ್ರತಿಬಂಧಿಸುವ ಬಗ್ಗೆ.

ಉಲ್ಲೇಖ : 1] Standard Operating Procedure (SOP) for last 72 hours till counting ನ ಪುಟ 19 ರಲ್ಲಿ ನೀಡಿರುವ ನಿರ್ದೇಶನದ ಪ್ರಕಾರ.

2] ಅಪರ ಆಯುಕ್ತರ (ದಕ್ಷಿಣ) ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬಿಬಿಎಂಪಿ, ಜಯನಗರ, ಬೆಂಗಳೂರು ರವರ ಕಛೇರಿಯ ಪತ್ರ ಸಂಖ್ಯೆ:ಅ.ಆ(ದ)&ಅ.ಜಿ.ಚು(ಬೆಂ–ದ)/ಸಿ1/ಪಿಆರ್/26/18–19, ದಿನಾಂಕ:25.05.2018.

ಪ್ರಸ್ತಾವನೆ:

ಭಾರತ ಚುನಾವಣಾ ಆಯೋಗವು ಅಧಿಸೂಚನೆ ಸಂಖ್ಯೆ:492/ಕೆಟಿ–ಎಲ್‌ಎ/2018, ದಿನಾಂಕ: 18.05.2018 ರಲ್ಲಿ ಜಯನಗರ ವಿಧಾನಸಭಾ ಕ್ಷೇತ್ರ–173 ರ ಚುನಾವಣೆಯ ಮತದಾನವನ್ನು ದಿನಾಂಕ: 11.06.2018 ಕ್ಕೆ ನಿಗದಿಪಡಿಸಿರುವುದರಿಂದ ಹಾಗೂ ಮತ ಎಣಿಕೆ ಕಾರ್ಯವನ್ನು ದಿನಾಂಕ:13.06.2018 ರಂದು ಹಮ್ಮಿಕೊಂಡಿರುವುದರಿಂದ, ಮತದಾನ ಪ್ರಕ್ರಿಯೆಯನ್ನು ಸುಸೂತ್ರವಾಗಿ ನಡೆಸುವ ಸಲುವಾಗಿ ಮತದಾನ ಮುಗಿಯುವ ಅವಧಿಯ ಹಿಂದಿನ 48 ಗಂಟೆಗಳು ಮತ್ತು ಮತದಾನ ಮುಗಿದ ನಂತರದ 24 ಗಂಟೆಗಳ ಅವಧಿಯಲ್ಲಿ ಸಿಆರ್‌ಪಿಸಿ ಕಲಂ.144 ರನ್ವಯ ಕಾನೂನು ಬಾಹಿರ ಗುಂಪುಗಾರಿಕೆ ಮತ್ತು ಸಾರ್ವಜನಿಕ ಸಭೆಯನ್ನು ನಡೆಸುವುದನ್ನು ಪ್ರತಿಬಂಧಿಸುವ ಬಗ್ಗೆ ನಿಷೇದಾಜ್ಞೆಯನ್ನು ಹೊರಡಿಸಬೇಕೆಂದು ಚುನಾವಣಾ ಆಯೋಗದಿಂದ ನಿರ್ದೇಶನ ನೀಡಲಾಗಿದ್ದು, ಅದರಂತೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಒಳಪಡುವ ಜಯನಗರ ವಿಧಾನಸಭಾ ಕ್ಷೇತ್ರ–173 ರಲ್ಲಿ ನಿಷೇದಾಜ್ಞೆಯನ್ನು ಜಾರಿ ಮಾಡುವ ಅವಶ್ಯಕತೆ ಇದೆ ಎಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ :ಎಸ್.ಬಿ./ಚುನಾವಣೆ/ನಿಷೇದಾಜ್ಞೆ/21/2018, ದಿನಾಂಕ: 04.06.2018.

ಈ ದಿಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಭಾರತೀಯ ದಂಡ ಪ್ರಕ್ರಿಯ ಸಂಹಿತೆಯ ಕಲಂ.144 ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಟಿ.ಸುನೀಲ್‌ಕುಮಾರ್, ಭಾ.ಪೊ.ಸೇ. ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ಪರಿಸ್ಥಿತಿಯನ್ನು ಅವಲೋಕಿಸಿ, ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಮುಂಜಾಗ್ರತಾ ಕ್ರಮಕ್ಕಾಗಿ ದಿನಾಂಕ: 09.06.2018 ರ ಸಂಜೆ 6.00 ಗಂಟೆಯಿಂದ ದಿನಾಂಕ: 12.06.2018 ರ ಸಂಜೆ 6.00 ಗಂಟೆಯವರೆಗೆ ನಿಷೇದಾಜ್ಞೆಯನ್ನು ಜಾರಿ ಮಾಡಿರುತ್ತದೆ.

ನಿಷೇದಾಜ್ಞೆ ಜಾರಿ ಮಾಡಿದ ಅವಧಿಯಲ್ಲಿ ಹಾಗೂ ಪ್ರದೇಶಗಳಲ್ಲಿ ನಾನು ಈ ಕೆಳಗೆ ಕಾಣಿಸಿದ ಚಟುವಟಿಕೆಗಳನ್ನು ನಿಷೇಧಿಸಿರುತ್ತೇನೆ.

1. ನಿಷೇದಾಜ್ಞೆಯ ಅವಧಿಯಲ್ಲಿ ದಿನಾಂಕ: 11.06.2018 ರಂದು ಮತದಾನ ಕೇಂದ್ರಗಳಿಗೆ ಮತ ಹಾಕಲು ಬರುವ ಮತದಾರರನ್ನು ಹೊರತುಪಡಿಸಿ, ಉಳಿದಂತೆ 5 ಜನರ ಮೇಲ್ಪಟ್ಟು ಗುಂಪುಗಾರಿಕೆ ಮಾಡುವುದಾಗಲೀ, ಇತರೆ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುವಂತಿಲ್ಲ.

2. ಯಾವುದೇ ಸಂಘಟನೆಗಳು/ರಾಜಕೀಯ ಪಕ್ಷಗಳು/ಧಾರ್ಮಿಕ ಪಂಗಡಗಳು ಮೆರವಣಿಗೆ ಮಾಡತಕ್ಕದ್ದಲ್ಲ ಹಾಗೂ ಪ್ರತಿಭಟನೆ ನಡೆಸತಕ್ಕದ್ದಲ್ಲ.

3. ಶಸ್ತ್ರ, ಕುಡುಗೋಲು, ಖಡ್ಗ, ಚೂರಿ, ಬಂದೂಕು, ಕೋಲು ಅಥವಾ ದೇಹಕ್ಕೆ ಅಪಾಯ ಉಂಟುಮಾಡಬಹುದಾದ ಮಾರಕಾಸ್ತ್ರಗಳನ್ನು ಒಯ್ಯತಕ್ಕದ್ದಲ್ಲ.

4. ಯಾವುದೇ ವಿನಾಶಕಾರಿ ವಸ್ತು ಇಲ್ಲವೇ ಸ್ಫೋಟಕ ವಸ್ತು ಒಯ್ಯತಕ್ಕದ್ದಲ್ಲ.

5. ಕಲ್ಲು ಅಥವಾ ಎಸೆಯುವ ವಸ್ತು ಅಥವಾ ವಸ್ತುಗಳನ್ನು ಎಸೆಯುವ ಅಥವಾ ಚಲಿಸುವ ಅಸ್ತ್ರಗಳನ್ನು ಸಂಗ್ರಹಿಸುವುದನ್ನು, ತಯಾರಿಸುವುದನ್ನು ನಿಷೇಧಿಸಿದೆ.

6. ಯಾವುದೇ ವ್ಯಕ್ತಿ ನಿಷೇಧಿಸುವ ಮಾರಕಾಸ್ತ್ರ, ಸ್ಫೋಟಕ ವಸ್ತುಗಳನ್ನು, ಬಂದೂಕುಗಳನ್ನು ಹೊಂದಿದ್ದಲ್ಲಿ ಅವುಗಳನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ ಮತ್ತು ಅಂತಹ ವ್ಯಕ್ತಿಯ ಬಳಿಯಲ್ಲಿರುವ ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು.

7. ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಕಾನೂನು ಬಾಹಿರವಾಗಿ ಗುಂಪು ಗುಂಪಾಗಿ ನಿಲ್ಲುವುದನ್ನು ಹಾಗೂ ಓಡಾಡುವುದನ್ನು ನಿಷೇಧಿಸಿದೆ.

8. ಭಾಷಣ ಮಾಡುವುದು ಹಾಗೂ ಪ್ರಚೋದನಾಕಾರಿಯಾಗಿ ಮಾತನಾಡುವುದನ್ನು ನಿಷೇಧಿಸಿದೆ.

9. ಬ್ಯಾನರ್ ಅಥವಾ ಫ್ಲೆಕ್ಸ್‌ಗಳನ್ನು ಅಂಟಿಸುವುದನ್ನು ನಿಷೇಧಿಸಿದೆ.

10. ಚುನಾವಣಾ ಆಯೋಗವು ನೀಡಿರುವ ಸ್ಪಷ್ಟೀಕರಣದಂತೆ ಮತದಾನದ ಹಿಂದಿನ 48 ಗಂಟೆಗಳ ಅವಧಿಯಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು 10 (ಹತ್ತು) ಜನರು ಮೀರದಂತೆ ಮನೆ ಮನೆಗೆ ಭೇಟಿ ನೀಡಿ ಚುನಾವಣಾ ಪ್ರಚಾರ ಮಾಡುವುದಕ್ಕೆ ವಿನಾಯಿತಿ ನೀಡಲಾಗಿದೆ.

ಈ ನಿಷೇದಾಜ್ಞೆಯನ್ನು ಸದುದ್ದೇಶದ ಶವಸಂಸ್ಕಾರ, ಮದುವೆ, ಧಾರ್ಮಿಕ ಆಚರಣೆ ನಡೆಸಲು ಹಾಗೂ ದೇವಸ್ಥಾನ, ಚರ್ಚ್ ಹಾಗೂ ಮಸೀದಿಗಳಿಗೆ ಪ್ರಾರ್ಥನೆಗೆ ತೆರಳುವವರಿಗೆ ಹಾಗೂ ಇನ್ನಿತರೆ ಸಮಾರಂಭಗಳನ್ನು ನಡೆಸಲು ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಂದ ಅನುಮತಿ ಪಡೆದವರಿಗೆ ಹಾಗೂ ಕಾರ್ಯಾಚರಣೆ ಅಧಿಕಾರಿಗಳಿಗೆ ಅನ್ವಯಿಸತಕ್ಕದ್ದಲ್ಲ.

ನಾನು ಈ ಮೂಲಕ ಆದೇಶಿಸುವುದೇನೆಂದರೆ, ಈ ನಿಷೇದಾಜ್ಞೆಯನ್ನು ಎದ್ದು ಕಾಣುವ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸುವ ಮೂಲಕ ಹಾಗೂ ಧ್ವನಿವರ್ಧಕ ಬಳಸಿ ವ್ಯಾಪಕ ಪ್ರಚಾರ ಮಾಡಲು ಹಾಗೂ ಈ ಆದೇಶವನ್ನು ಯಥಾವತ್ತಾಗಿ ಜಾರಿಗೆ ತರಲು ಪೊಲೀಸ್ ಅಧಿಕಾರಿಗಳಿಗೆ ಈ ಮೂಲಕ ಆದೇಶಿಸಿರುತ್ತೇನೆ.

ಈ ಆದೇಶವನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018ರ ಜೂನ್ ಮಾಹೆಯ ದಿನಾಂಕ 04 ರಂದು ಹೊರಡಿಸಲಾಗಿದೆ.

ಟಿ. ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಬುಧವಾರ, ಜೂನ್ ೬, ೨೦೧೮ (ಜ್ಯೇಷ್ಠ ೧೬, ಶಕ ವರ್ಷ ೧೯೪೦)	ನಂ. ೮೫೨
Part–I	Bengaluru, Wednesday, June 6, 2018 (Jyeshta 16, Shaka Varsha 1940)	No. 852

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು : ಶ್ರೀ.ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ದಿನಾಂಕ: 13.06.2018 ರಂದು ಬೆಳಿಗ್ಗೆ 6.00 ಗಂಟೆಯಿಂದ ಮದ್ಯರಾತ್ರಿ 12.00 ಗಂಟೆಯವರೆಗೆ ಪ್ರತಿಬಂದಕಾಜ್ಞೆಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ : ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:492/ಕೆಟಿ–ಎಲ್‌ಎ/2018, ದಿನಾಂಕ: 18.05.2018.

ಪ್ರಸ್ತಾವನೆ:–

ದಿನಾಂಕ: 11.06.2018 ರಂದು 173–ಜಯನಗರ ವಿಧಾನಸಭಾ ಕ್ಷೇತ್ರದ ಚುನಾವಣೆ–2018 ರ ಮತದಾನ ನಡೆಯಲಿದ್ದು, ದಿನಾಂಕ: 13.06.2018 ರಂದು ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ತಿಲಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ಎಸ್.ಎಸ್.ಎಂ.ಆರ್.ವಿ. ಕಾಲೇಜಿನ ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಪ್ರಕ್ರಿಯೆ ನಡೆಯುವುದು.

ಈ ಸಮಯದಲ್ಲಿ ಸಮಾಜಘಾತುಕ ವ್ಯಕ್ತಿಗಳು, ಕೆಲವು ಕಿಡಿಗೇಡಿಗಳು, ಗೆದ್ದ ಹಾಗೂ ಸೋತ ಅಭ್ಯರ್ಥಿಗಳ ಪರ/ವಿರುದ್ದ ಪ್ರತಿಭಟನೆ ನಡೆಸಿ, ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ನಷ್ಟವುಂಟುಮಾಡುವ ಸಾಧ್ಯತೆಗಳು ಇರುವುದಾಗಿ ಉಪ ಪೊಲೀಸ್ ಆಯುಕ್ತರು, ಗುಪ್ತವಾರ್ತೆ, ಬೆಂಗಳೂರು ನಗರ ರವರು ನೀಡಿರುವ ವರದಿಯಿಂದ ತಿಳಿದುಬಂದಿರುವುದರಿಂದಲೂ ಮತ್ತು ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಸಾಕಷ್ಟು ಸತ್ಯಾಂಶ ಇದೆಯೆಂದು ತಿಳಿದುಬಂದಿರುವುದರಿಂದಲೂ,

ಈ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಲೂ, ಖಾಸಗಿ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟುಮಾಡುವ ಘಟನೆಗಳನ್ನು ತಡೆಯುವ ಅವಶ್ಯಕತೆಯಿರುವುದರಿಂದಲೂ, ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್‌ಬಿ/ವಿ.ಸ.ಚುನಾವಣೆ–22/2018, ದಿನಾಂಕ: 05.06.2018

ಈ ದೆಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ದಂಡ ಪ್ರಕ್ರಿಯ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ 13.06.2018 ರಂದು ಬೆಳಿಗ್ಗೆ 06.00 ಘಂಟೆಯಿಂದ ದಿನಾಂಕ:13.06.2018 ರ ಮದ್ಯರಾತ್ರಿ 12.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ, ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,

2. ಮೆರವಣಿಗೆ ಮತ್ತು ಸಭೆಗಳನ್ನು, (ಶವಸಂಸ್ಕಾರ ಮತ್ತು ಮದುವೆ ಮೆರವಣಿಗೆಗಳನ್ನು ಹೊರತುಪಡಿಸಿ).

3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,

4. ಯಾವುದೇ ಸಂರಕ್ಷಾರ್ಹ ಪದಾರ್ಥ ಅಥವಾ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,

5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018 ರ ಜೂನ್ ಮಾಹೆಯ ದಿನಾಂಕ 05 ರಂದು ಹೊರಡಿಸಲಾಗಿದೆ.

ಟಿ. ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಬುಧವಾರ, ಜೂನ್ ೬, ೨೦೧೮ (ಜ್ಯೇಷ್ಠ ೧೬, ಶಕ ವರ್ಷ ೧೯೪೦) Bengaluru, Wednesday, June 6, 2018 (Jyeshta 16, Shaka Varsha 1940)	ನಂ. ೮೫೩ No. 853

ಕರ್ನಾಟಕ ಸರ್ಕಾರದ ನಡವಳಿಗಳು

ಶಿಕ್ಷಣ ಸಚಿವಾಲಯ

ವಿಷಯ: ಪ್ರೌಢಶಾಲಾ ಹಂತದಲ್ಲಿ ಮರಾಠಿ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಕಲಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು ರವರ ಪತ್ರ ಸಂಖ್ಯೆ:ಎಂಸಿ(5)ಮ.ತೃ.ಅ/05/2015–16, ದಿನಾಂಕ:17–12–2016.

ಪ್ರಸ್ತಾವನೆ :

ಮೇಲೆ ಓದಲಾದ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು, ಇವರ ವರದಿಯಲ್ಲಿ ಪ್ರೌಢಶಾಲಾ ಹಂತದಲ್ಲಿ ಮರಾಠಿ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಕಲಿಸಲು ಪಠ್ಯವಸ್ತು ರಚನೆಗೆ ಅನುಮತಿ ಸಂಬಂಧಿಸಿದಂತೆ, ಪ್ರಸಕ್ತ ಮರಾಠಿ ಮಾತೃ ಭಾಷೆಯ ಮಕ್ಕಳು ಮರಾಠಿ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಹಾಗೂ ಮಾಧ್ಯಮವಾಗಿ ವ್ಯಾಸಂಗ ಮಾಡುತ್ತಿದ್ದಾರೆ ಮತ್ತು ಮರಾಠಿ ಮಾಧ್ಯಮದಲ್ಲಿ 139976 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

ಮರಾಠಿ ಮಾತೃ ಭಾಷೆಯ ಮಕ್ಕಳು ಮರಾಠಿ ಮಾಧ್ಯಮ ಬಿಟ್ಟು ಬೇರೆ ಬೇರೆ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವಾಗ ಮೂರನೇ ಭಾಷೆಯಾಗಿ ಮರಾಠಿ ಭಾಷೆಯನ್ನು ಓದಲು ಅವಕಾಶವಿರುತ್ತದೆ. ಮರಾಠ ಸಂಘದವರು 1ನೇ ತರಗತಿಯಿಂದ 10ನೇ ತರಗತಿವರೆಗೆ ಓದುತ್ತಿರುವ ಮಕ್ಕಳಿಗೆ ಮರಾಠಿಯನ್ನು ತೃತೀಯ ಭಾಷೆಯನ್ನಾಗಿ ಓದಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.

ಮರಾಠಿ ಮಹಾಮಂಡಳದ ಅಧ್ಯಕ್ಷರು ಹಾಗೂ ಪಠ್ಯಪುಸ್ತಕ ಸಂಘದ ಅಧಿಕಾರಿಗಳೊಂದಿಗೆ ಚರ್ಚಿಸಿ. ಅಥಣಿ, ಬೆಳಗಾವಿ, ಚಿಕ್ಕೋಡಿ, ಖಾನಪುರ, ಔರಾದ್, ಬಸವಕಲ್ಯಾಣ, ಬಾಲ್ಕಿ ತಾಲ್ಲೂಕುಗಳಲ್ಲಿ ಮರಾಠಿ ಭಾಷಿಕರು ಹೆಚ್ಚಾಗಿರುವುದರಿಂದ ಮರಾಠಿ ಭಾಷೆಯನ್ನು ತೃತೀಯ ಭಾಷೆಯಾಗಿ 6ನೇ ತರಗತಿಯಿಂದ ನೀಡಬಹುದೆಂದು ಸಹಮತಿ ವ್ಯಕ್ತಪಡಿಸಿರುತ್ತಾರೆ.

ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ರವರು ನೀಡಿರುವ ಮಾಹಿತಿಯಂತೆ ತುಳು, ಪರ್ಶಿಯನ್, ಅರೇಬಿಕ್, ಕೊಂಕಣಿ(ದೇವ), ಕೊಂಕಣಿ(ಕನ್ನಡ), ಈ ತೃತೀಯ ಭಾಷೆಗಳ ಅಂಕಿ ಅಂಶಗಳನ್ನು ತುಲನೆ ಮಾಡಿದಾಗ ತೃತೀಯ ಭಾಷೆಯಾಗಿ ಅಭ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ ಕಡಿಮೆ ಇರುವುದು ಕಂಡು ಬರುತ್ತದೆ. ಆದರೆ ಈ ಭಾಷೆಗಳಿಗಿಂತ ಮರಾಠಿ ಭಾಷಿಕರು ಹೆಚ್ಚಾಗಿರುವುದರಿಂದ 6ನೇ ತರಗತಿಯಲ್ಲಿ ಪ್ರಥಮ ಮತ್ತು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡದಿರುವ ಮಕ್ಕಳು ಮರಾಠಿಯನ್ನು ತೃತೀಯ ಭಾಷೆಯಾಗಿ ಕಲಿಯಲು ಅವಕಾಶ ಕಲ್ಪಿಸಬಹುದೆಂದು ಅಭಿಪ್ರಾಯಿಸಿ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಇಡಿ 123 ಪಿಎಂಸಿ 2017, ಬೆಂಗಳೂರು, ದಿನಾಂಕ:04–06–2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019–20ನೇ ಸಾಲಿನಿಂದ 6ನೇ ತರಗತಿಯಲ್ಲಿ ಮರಾಠಿ ಭಾಷೆಯನ್ನು ಪ್ರಥಮ ಮತ್ತು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡದಿರುವ ಮಕ್ಕಳಿಗೆ ಮರಾಠಿ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಕಲಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ.ನಾಗೇಶ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಗುರುವಾರ, ಜೂನ್ ೭, ೨೦೧೮ (ಜ್ಯೇಷ್ಠ ೧೭, ಶಕ ವರ್ಷ ೧೯೪೦)	ನಂ. ೮೫೫
Part–I	**Bengaluru, Thursday, June 7, 2018 (Jyeshta 17, Shaka Varsha 1940)**	**No. 855**

PROCEEDINGS OF THE ADDITIONAL DISTRICT MAGISTRATE AND COMMISSIONER OF POLICE, BENGALURU CITY

PRESENT: T.Suneel Kumar, IPS, Commissioner of Police, Bengaluru City

READ : 1] Election Commission of India Notification No.322/KT-LC-G&T/2018, Dated: 15-05-2018.
2] Chief Electoral Officer, Karnataka, Nirvachana Nilaya, Sheshadri Road, Bengaluru, Letter No.DPAR 233CHUMAPA2018, Dated:06.06.2018

PREAMBLE :

WHEREAS the Election Commission of India has notified for conducting the poll to the Legislative Council of the State of Karnataka in the Bengaluru Graduates Constituency on 08.06.2018 (Friday) in the limits of **Bengaluru City Police Commissionerate vide** Election Commission of India Notification No.322/KT-LC-G&T/2018, Dated: 15-05-2018.

WHEREAS anti-social elements are likely to take advantage of the situation after consumption of liquor indulging in acts of violence and disrupt free, fair and peaceful conduct of ensuing Graduates Election to Bengaluru Graduates Constituency.

WHEREAS, I consider it absolutely necessary to maintain peace in the interest of free, fair, peaceful and smooth conduct of the polling in Bengaluru Graduates Constituency, Bengaluru City.

WHEREAS the sale, consumption of liquor, wine, arrack or any other intoxicants are likely to lead to violence which will affect free, fair, peaceful and smooth conduct of the elections and also create Law and Order problem in Bengaluru Graduates Constituency, Bengaluru City.

ORDER NO.24/ELN/2018, DATED: 06.06.2018

NOW THEREFORE, in exercise of the powers vested in me under sub-section (1) and (3) of Section 144 of the Criminal Procedure Code, I, T.Suneel Kumar, IPS, Commissioner of Police, Bengaluru City do hereby prohibit sale, consumption, procurement and storage of liquor, wine, arrack or any other intoxicant in any wholesale and retail outlets. Order that all liquor shops, wine shops, bars, Hotels, Restaurants, Tavern, shops or any other place, Public or Private situated in the limits of Benglauru City Police Commissionrate, Bengaluru City will remain closed during the dates specified below.

From 06-00 AM on 08.06.2018 to 12-00 Midnight of 08.06.2018.

Given under my hand and seal of this 6th Day of June 2018.

T. Suneel Kumar, IPS
Commissioner of Police
Bengaluru City.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಗುರುವಾರ, ಜೂನ್ ೭, ೨೦೧೮ (ಜ್ಯೇಷ್ಠ ೧೭, ಶಕ ವರ್ಷ ೧೯೪೦) Bengaluru, Thursday, June 7, 2018 (Jyeshta 17, Shaka Varsha 1940)	ನಂ. ೮೫೬ No. 856

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು : ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರರ ಕ್ಷೇತ್ರದ ಚುನಾವಣೆಯ ಸಂಬಂಧ ಚುನಾವಣಾ ದಿನಾಂಕ :08/06/2018 ರಂದು ಬೆಳಿಗ್ಗೆ 06–00 ಗಂಟೆಯಿಂದ ಮದ್ಯ ರಾತ್ರಿ 12–00 ಗಂಟೆಯವರೆಗೆ ಸಿಆರ್‌ಪಿಸಿ ಕಲಂ.144 ರನ್ವಯ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ : ಭಾರತ ಚುನಾವಣಾ ಆಯೋಗದ ಪ್ರಕಟಣೆ ಸಂಖ್ಯೆ:322/ಕೆಟಿ–ಎಲ್‌ಸಿ–ಜಿ & ಟಿ/2018, ದಿನಾಂಕ:15.05.2018.

ಪ್ರಸ್ತಾವನೆ:

ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:322/ಕೆಟಿ–ಎಲ್‌ಸಿ–ಜಿ&ಟಿ/2018, ದಿನಾಂಕ: 15.05.2018 ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರರ ಕ್ಷೇತದ ಚುನಾವಣೆಯ ಮತದಾನವನ್ನು ದಿನಾಂಕ: 08.06.2018 ಕ್ಕೆ ನಿಗದಿಪಡಿಸಿರುವುದರಿಂದ, ಕಾನೂನು ಬಾಹಿರ ಗುಂಪುಗಾರಿಕೆ ನಡೆಸುವುದನ್ನು, ಕಾನೂನು ಮತ್ತು ಸುವ್ಯಸ್ಥೆಗೆ ಭಂಗ ತರುವ ಕೃತ್ಯಗಳು ನಡೆಯುವ ಸಾದ್ಯತೆಗಳಿರುವುದಾಗಿ ಉಪ ಪೊಲೀಸ್ ಆಯುಕ್ತರು ಗುಪ್ತವಾರ್ತೆ, ಬೆಂಗಳೂರು ನಗರ ರವರು ನೀಡಿರುವ ವರದಿಯಿಂದ ತಿಳಿದು ಬಂದಿರುವುದರಿಂದಲೂ ಮತ್ತು ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಸಾಕಷ್ಟು ಸತ್ಯಾಂಶ ಇದೆಯೆಂದು ತಿಳಿದು ಬಂದಿರುವುದರಿಂದಲೂ,

ಈ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಲೂ, ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್‌ಬಿ/ವಿ.ಸ.ಚುನಾವಣೆ–23/2018, ದಿನಾಂಕ: 06.06.2018

ಈ ದೆಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ದಂಡ ಪ್ರಕ್ರಿಯ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ 08.06.2018 ರಂದು ಬೆಳಿಗ್ಗೆ 06.00 ಘಂಟೆಯಿಂದ ದಿನಾಂಕ:08.06.2018 ರ ಮದ್ಯರಾತ್ರಿ 12.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ, ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಪದವಿಧರ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,

2. ಮೆರವಣಿಗೆ ಮತ್ತು ಸಭೆಗಳನ್ನು, (ಶವಸಂಸ್ಕಾರ ಮತ್ತು ಮದುವೆ ಮೆರವಣಿಗೆಗಳನ್ನು ಹೊರತುಪಡಿಸಿ).

3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,

4. ಯಾವುದೇ ಸಂರಕ್ಷಾರ್ಹ ಪದಾರ್ಥ ಅಥವಾ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,

5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018 ರ ಜೂನ್ ಮಾಹೆಯ ದಿನಾಂಕ 06 ರಂದು ಹೊರಡಿಸಲಾಗಿದೆ.

ಟಿ. ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಶುಕ್ರವಾರ, ಜೂನ್ ೧೫, ೨೦೧೮ (ಜ್ಯೇಷ್ಠ ೨೫, ಶಕ ವರ್ಷ ೧೯೪೦) Bengaluru, Friday, June 15, 2018 (Jyeshta 25, Shaka Varsha 1940)	ನಂ. ೮೭೭ No. 877

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು: ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.121 (ಬಿನ್ನಿಪೇಟೆ ವಾರ್ಡ್) ರ ಉಪ ಚುನಾವಣೆಯ ಮತದಾನದ ಸಂಬಂಧ ದಿನಾಂಕ :18.06.2018 ರಂದು ಬೆಳಿಗ್ಗೆ 06–00 ಗಂಟೆಯಿಂದ ಮದ್ಯ ರಾತ್ರಿ 12–00 ಗಂಟೆಯವರೆಗೆ ಸಿಆರ್‌ಪಿಸಿ ಕಲಂ.144 ರನ್ವಯ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ : ರಾಜ್ಯ ಚುನಾವಣಾ ಆಯೋಗದ ತಿದ್ದುಪಡಿ ಆದೇಶ ಸಂಖ್ಯೆ: ರಾಚುಆ.33.ಇಯುಬಿ.2018, ದಿನಾಂಕ:29.05.2018.

ಪ್ರಸ್ತಾವನೆ:

ರಾಜ್ಯ ಚುನಾವಣಾ ಆಯೋಗದ ತಿದ್ದುಪಡಿ ಆದೇಶ ಸಂಖ್ಯೆ:ರಾಚುಆ.33.ಇಯುಬಿ.2018, ದಿನಾಂಕ:29.05.2018. ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 121 (ಬಿನ್ನಿಪೇಟೆ ವಾರ್ಡ್) ರಲ್ಲಿ ತೆರವಾಗಿರುವ ಸದಸ್ಯ ಸ್ಥಾನದ ಉಪ ಚುನಾವಣೆಯ ಮತದಾನವನ್ನು ದಿನಾಂಕ: 18.06.2018 ಕ್ಕೆ ನಿಗದಿಪಡಿಸಿರುವುದರಿಂದ, ಕಾನೂನು ಬಾಹಿರ ಗುಂಪುಗಾರಿಕೆ ನಡೆಸುವುದನ್ನು, ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ಕೃತ್ಯಗಳು ನಡೆಯುವ ಸಾದ್ಯತೆಗಳಿರುವುದಾಗಿ ಉಪ ಪೊಲೀಸ್ ಆಯುಕ್ತರು ಗುಪ್ತವಾರ್ತೆ, ಬೆಂಗಳೂರು ನಗರ ರವರು ನೀಡಿರುವ ವರದಿಯಿಂದ ತಿಳಿದು ಬಂದಿರುವುದರಿಂದಲೂ ಮತ್ತು ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಸಾಕಷ್ಟು ಸತ್ಯಾಂಶ ಇದೆಯೆಂದು ತಿಳಿದು ಬಂದಿರುವುದರಿಂದಲೂ,

ಈ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಲೂ, ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್‌ಬಿ/ಕ.ಮು.ಕಾ.ಚುನಾವಣೆ 27/2018, ದಿನಾಂಕ: 14.06.2018

ಈ ದೆಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ದಂಡ ಪ್ರಕ್ರಿಯ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ 18.06.2018 ರಂದು ಬೆಳಿಗ್ಗೆ 06.00 ಘಂಟೆಯಿಂದ ದಿನಾಂಕ:18.06.2018 ರ ಮದ್ಯರಾತ್ರಿ 12.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ, ಬಿನ್ನಿಪೇಟೆ ವಾರ್ಡ್ ನಂಬರ್ 121 ರ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,

2. ಮೆರವಣಿಗೆ ಮತ್ತು ಸಭೆಗಳನ್ನು, (ಶವಸಂಸ್ಕಾರ ಮತ್ತು ಮದುವೆ ಮೆರವಣಿಗೆಗಳನ್ನು ಹೊರತುಪಡಿಸಿ).

3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,

4. ಯಾವುದೇ ಸಂರಕ್ಷಾರ್ಹ ಪದಾರ್ಥ ಅಥವಾ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,

5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018 ರ ಜೂನ್ ಮಾಹೆಯ ದಿನಾಂಕ 14 ರಂದು ಹೊರಡಿಸಲಾಗಿದೆ.

ಟಿ.ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಜೂನ್ ೧೫, ೨೦೧೮ (ಜ್ಯೇಷ್ಠ ೨೫, ಶಕ ವರ್ಷ ೧೯೪೦)	ನಂ. ೮೭೮
Part–I	Bengaluru, Friday, June 15, 2018 (Jyeshta 25, Shaka Varsha 1940)	No. 878

PROCEEDINGS OF THE ADDITIONAL DISTRICT MAGISTRATE AND COMMISSIONER OF POLICE, BENGALURU CITY

PRESENT : T.Suneel Kumar, IPS, Commissioner of Police, Bengaluru City.

READ : State Election Commission, Karnataka, Cunningham Road, Bengaluru, Notification No.RCA.33.EUB.2018, Dated: 29-05-2018.

PREAMBLE :

WHEREAS the State Election Commission, Karnataka has notified for conducting the By-Election to the Bengaluru Mahanagara Palike Ward No.121 (Binnypet Ward), Bengaluru City, on 18.06.2018 (Monday) **vide** State Election Commission, Karnataka, Cunningham Road, Bengaluru, Notification No.RCA.33.EUB.2018, Dated: 29-05-2018.

WHEREAS anti-social elements are likely to take advantage of the situation after consumption of liquor indulging in acts of violence and disrupt free, fair and peaceful conduct of ensuing By-Election to Bengaluru Mahanagara Palike Binnypet Ward No-121.

WHEREAS, I consider it absolutely necessary to maintain peace in the interest of free, fair, peaceful and smooth conduct of the polling in Bengaluru Mahanagara Palike Binnypet Ward No-121, Bengaluru City.

WHEREAS the sale, consumption of liquor, wine, arrack or any other intoxicants are likely to lead to violence which will affect free, fair, peaceful and smooth conduct of the elections and also create Law and Order problem in Bengaluru Mahanagara Palike Binnypet Ward No-121, Bengaluru City.

ORDER NO.28/ELN/2018 DATED: 14.06.2018

NOW THEREFORE, in exercise of the powers vested in me under sub-section (1) and (3) of Section 144 of the Criminal Procedure Code, I, T.Suneel Kumar, IPS, Commissioner of Police, Bengaluru City do hereby prohibit sale, consumption, procurement and storage of liquor, wine, arrack or any other intoxicant in any wholesale and retail outlets. Order that all liquor shops, wine shops, bars, Hotels, Restaurants, Tavern, shops or any other place, Public or Private situated in the limits of K.P.Agrahara, J.J.Nagar and Magadi Road Police Stations Limits Benglauru City, will remain closed during the dates specified below.

From 06-00 AM on 18.06.2018 to 12-00 Midnight of 18.06.2018 and

Given under my hand and seal of this 14th Day of June 2018.

T.Suneel Kumar, IPS
Commissioner of Police
Bengaluru City.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಶುಕ್ರವಾರ, ಜೂನ್ ೧೫, ೨೦೧೮ (ಜ್ಯೇಷ್ಠ ೨೫, ಶಕ ವರ್ಷ ೧೯೪೦) Bengaluru, Friday, June 15, 2018 (Jyeshta 25, Shaka Varsha 1940)	ನಂ. ೮೭೯ No. 879

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು : ಶ್ರೀ.ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.121 (ಬಿನ್ನಿಪೇಟೆ ವಾರ್ಡ್) ರ ಉಪ ಚುನಾವಣೆಯ ಮತ ಎಣಿಕೆ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ದಿನಾಂಕ 20.06.2018 ರಂದು ಬೆಳಿಗ್ಗೆ 06–00 ಗಂಟೆಯಿಂದ ಮದ್ಯ ರಾತ್ರಿ 12–00 ಗಂಟೆಯವರೆಗೆ ಸಿಆರ್‌ಪಿಸಿ ಕಲಂ.144 ರನ್ವಯ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ : ರಾಜ್ಯ ಚುನಾವಣಾ ಆಯೋಗದ ತಿದ್ದುಪಡಿ ಆದೇಶ ಸಂಖ್ಯೆ: ರಾಚುಆ.33.ಇಯುಬಿ.2018, ದಿನಾಂಕ:29.05.2018.

ಪ್ರಸ್ತಾವನೆ:–

ರಾಜ್ಯ ಚುನಾವಣಾ ಆಯೋಗದ ತಿದ್ದುಪಡಿ ಆದೇಶ ಸಂಖ್ಯೆ: ರಾಚುಆ.33.ಇಯುಬಿ.2018, ದಿನಾಂಕ:29.05.2018 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 121 (ಬಿನ್ನಿಪೇಟೆ ವಾರ್ಡ್) ರಲ್ಲಿ ತೆರವಾಗಿರುವ ಸದಸ್ಯ ಸ್ಥಾನದ ಉಪ ಚುನಾವಣೆಯ ಮತ ಎಣಿಕೆ ಕಾರ್ಯವನ್ನು ದಿನಾಂಕ: 20.06.2018 ರಂದು ನಿಗದಿಪಡಿಸಿರುವುದರಿಂದ, ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಒಳಪಡುವ ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಶ್ರೀಮತಿ.ವಿ.ಹೆಚ್.ಡಿ ಹೋಮ್ ಸೈನ್ಸ್ ಕಾಲೇಜಿನ ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆ ಪ್ರಕ್ರಿಯೆ ನಡೆಯುವುದು.

ಈ ಸಮಯದಲ್ಲಿ ಸಮಾಜಘಾತುಕ ವ್ಯಕ್ತಿಗಳು, ಕೆಲವು ಕಿಡಿಗೇಡಿಗಳು, ಗೆದ್ದ ಹಾಗೂ ಸೋತ ಅಭ್ಯರ್ಥಿಗಳ ಪರ/ವಿರುದ್ಧ ಪ್ರತಿಭಟನೆ ನಡೆಸಿ, ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ನಷ್ಟವುಂಟುಮಾಡುವ ಸಾಧ್ಯತೆಗಳು ಇರುವುದಾಗಿ, ಉಪ ಪೊಲೀಸ್ ಆಯುಕ್ತರು, ಗುಪ್ತವಾರ್ತೆ, ಬೆಂಗಳೂರು ನಗರ ರವರು ನೀಡಿರುವ ವರದಿಯಿಂದ ತಿಳಿದುಬಂದಿರುವುದರಿಂದಲೂ ಮತ್ತು ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಸಾಕಷ್ಟು ಸತ್ಯಾಂಶ ಇದೆಯೆಂದು ತಿಳಿದುಬಂದಿರುವುದರಿಂದಲೂ,

ಈ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಲೂ, ಖಾಸಗಿ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟುಮಾಡುವ ಘಟನೆಗಳನ್ನು ತಡೆಯುವ ಅವಶ್ಯಕತೆಯಿರುವುದರಿಂದಲೂ, ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್‌ಬಿ/ಬೆ.ಮ.ಪಾ.ಚುನಾವಣೆ–29/2018, ದಿನಾಂಕ: 14.06.2018

ಈ ದೆಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ದಂಡ ಪ್ರಕ್ರಿಯ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ 20.06.2018 ರಂದು ಬೆಳಿಗ್ಗೆ 06.00 ಘಂಟೆಯಿಂದ ದಿನಾಂಕ:20.06.2018 ರ ಮದ್ಯರಾತ್ರಿ 12.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ, ಶ್ರೀಮತಿ.ವಿ.ಹೆಚ್.ಡಿ

ಹೋಮ್ ಸೈನ್ಸ್ ಕಾಲೇಜಿನ ಮತ ಎಣಿಕೆ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,
2. ಮೆರವಣಿಗೆ ಮತ್ತು ಸಭೆಗಳನ್ನು, (ಶವಸಂಸ್ಕಾರ ಮತ್ತು ಮದುವೆ ಮೆರವಣಿಗೆಗಳನ್ನು ಹೊರತುಪಡಿಸಿ).
3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,
4. ಯಾವುದೇ ಸಂರಕ್ಷಾರ್ಹ ಪದಾರ್ಥ ಅಥವಾ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,
5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018 ರ ಜೂನ್ ಮಾಹೆಯ ದಿನಾಂಕ 14 ರಂದು ಹೊರಡಿಸಲಾಗಿದೆ.

ಟಿ.ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಜೂನ್ ೧೫, ೨೦೧೮ (ಜ್ಯೇಷ್ಠ ೨೫, ಶಕ ವರ್ಷ ೧೯೪೦)	ನಂ. ೮೮೦
Part–I	**Bengaluru, Friday, June 15, 2018 (Jyeshta 25, Shaka Varsha 1940)**	**No. 880**

PROCEEDINGS OF THE ADDITIONAL DISTRICT MAGISTRATE AND COMMISSIONER OF POLICE, BENGALURU CITY

PRESENT : T.Suneel Kumar, IPS, Commissioner of Police, Bengaluru City.

READ : State Election Commission, Karnataka, Cunningham Road, Bengaluru, Notification No.RCA.33.EUB.2018, Dated: 29-05-2018.

PREAMBLE :

WHEREAS the State Election Commission, Karnataka has notified for conducting the By-Election to the Bengaluru Mahanagara Palike Ward No.121 (Binnypet Ward), Bengaluru City, on 18.06.2018 (Monday) and the date of counting is scheduled on 20-06-2018 at Smt. V.H.D Home Science College, Palace Road, Bengaluru in the limits of Upparpet PS of Bengaluru Police Commissionerate.

WHEREAS anti-social elements are likely to take advantage of the situation after consumption of liquor indulging in acts of violence and disrupt free, fair and peaceful conduct of ensuing By-Election counting of Bengaluru Mahanagara Palike Binnypet Ward No-121.

WHEREAS, I consider it absolutely necessary to maintain peace in the interest of free, fair, peaceful and smooth conduct of the counting of Bengaluru Mahanagara Palike Binnypet Ward No-121, Bengaluru City.

WHEREAS the sale, consumption of liquor, wine, arrack or any other intoxicants are likely to lead to violence which will affect free, fair, peaceful and smooth conduct of the elections and counting and also create Law and Order problem in Bengaluru Mahanagara Palike Binnypet Ward No-121, Bengaluru City.

ORDER NO.30/ELN/2018, DATED: 14.06.2018

NOW THEREFORE, in exercise of the powers vested in me under sub-section (1) and (3) of Section 144 of the Criminal Procedure Code, I, T.Suneel Kumar, IPS, Commissioner of Police, Bengaluru City do hereby prohibit sale, consumption, procurement and storage of liquor, wine, arrack or any other intoxicant in any wholesale and retail outlets. Order that all liquor shops, wine shops, bars, Hotels, Restaurants, Tavern, shops or any other place, Public or Private situated in the limits of Upparpet, K.P.Agrahara, J.J.Nagar and Magadi Road Police Stations Limits Benglauru City, will remain closed during the dates specified below.

From 06-00 AM on 20.06.2018 to 12-00 Midnight of 20.06.2018 and

Given under my hand and seal of this 14th Day of June 2018.

T.Suneel Kumar, IPS
Commissioner of Police
Bengaluru City.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಶುಕ್ರವಾರ, ಜೂನ್ ೨೯, ೨೦೧೮ (ಆಷಾಡ ೮, ಶಕ ವರ್ಷ ೧೯೪೦) Bengaluru, Friday, June 29, 2018 (Aashada 8, Shaka Varsha 1940)	ನಂ. ೯೧೫ No. 915

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು: ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ದಿನಾಂಕ: 02.07.2018 ರಿಂದ ದಿನಾಂಕ: 06.07.2018 ರವರೆಗೆ ವಿಧಾನಸೌಧದಲ್ಲಿ ನಡೆಯುವ ಅಧಿವೇಶನದ ಸಂಬಂಧ ಪ್ರತಿಬಂಧಕಾಜ್ಞೆ ಜಾರಿ ಮಾಡುವ ಬಗ್ಗೆ.

ಪ್ರಸ್ತಾವನೆ :

ದಿನಾಂಕ: 02.07.2018ರಿಂದದಿನಾಂಕ: 06.07.2018 ರವರೆಗೆ ವಿಧಾನಸೌಧದಲ್ಲಿ ಬಜೆಟ್ ಅಧಿವೇಶನ ನಡೆಯಲಿದ್ದು, ಈ ಸಮಯದಲ್ಲಿ ವಿವಿಧ ರಾಜಕೀಯ ಪಕ್ಷಗಳು, ವಿವಿಧ ಸಂಘಟನೆಗಳು ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ಮೆರವಣಿಗೆ, ಪ್ರತಿಭಟನೆ, ಧರಣಿ ಸತ್ಯಾಗ್ರಹ, ವಿಧಾನಸೌಧ ಮುತ್ತಿಗೆ, ಇತ್ಯಾದಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಾಧ್ಯತೆ ಇರುತ್ತವೆ. ಇದರಿಂದ ಅಧಿವೇಶನದ ಕಾರ್ಯಕಲಾಪಗಳಿಗೆ ಅಡಚಣೆ ಉಂಟಾಗುವುದಲ್ಲದೆ ಸಾರ್ವಜನಿಕ ನೆಮ್ಮದಿಗೆ ಭಂಗ ಹಾಗೂ ಸುಗಮ ಸಂಚಾರಕ್ಕೆ ತೊಂದರೆಯುಂಟಾಗುವ ಸಾಧ್ಯತೆಗಳು ಇರುವುದಾಗಿ ಗುಪ್ತವಾರ್ತಾ ಮಾಹಿತಿಯಿಂದ ತಿಳಿದುಬಂದಿರುತ್ತದೆ.

ಈ ನಿಟ್ಟಿನಲ್ಲಿ ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಮತ್ತು ಗುಪ್ತವಾಗಿ ಸಂಗ್ರಹಿಸಿದ ಮಾಹಿತಿಯಿಂದ ಹಾಗೂ ಗುಪ್ತವಾರ್ತಾ ವಿಭಾಗದ ಮಾಹಿತಿಯಿಂದ ಸಾಕಷ್ಟು ಸತ್ಯಾಂಶವಿದೆಯೆಂದು ತಿಳಿದು ಬಂದಿರುವುದರಿಂದಲೂ, ಅಧಿವೇಶನದ ಕಲಾಪಗಳು ಸುಗಮವಾಗಿ ನಡೆಯುವ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್.ಬಿ/ಗು.ವಾ/ನಿಷೇದಾಜ್ಞೆ/ 32/2018 ದಿನಾಂಕ : 29.06.2018

ಈ ದಿಸೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನನಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು **ದಿನಾಂಕ: 02.07.2018ರ ಬೆಳಿಗ್ಗೆ 06–00 ಗಂಟೆಯಿಂದ ದಿನಾಂಕ:06–07–2018 ರಂದು ಮಧ್ಯರಾತ್ರಿ 12–00 ಗಂಟೆಯವರೆಗೆ** ಬೆಂಗಳೂರು ನಗರದ ವಿಧಾನಸೌಧ ಕಟ್ಟಡದ ಸುತ್ತಲೂ ಎರಡು ಕಿ.ಮೀ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ನಿಷೇದಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಉಂಟು ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,
2. ಮೆರವಣಿಗೆ ಮತ್ತು ಸಭೆಗಳನ್ನು ನಡೆಸುವುದನ್ನು,
3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು, ಕಲ್ಲು, ಇಟ್ಟಿಗೆ, ಚಾಕು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,
4. ಯಾವುದೇ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,
5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018 ರ ಜೂನ್‌ಮಾಹೆಯ ದಿನಾಂಕ 29 ರಂದು ಹೊರಡಿಸಲಾಗಿದೆ.

ಟಿ.ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು
ಬೆಂಗಳೂರು ನಗರ

ವಿಷಯ : ದಿನಾಂಕ: 09.07.2018 ರಿಂದ ದಿನಾಂಕ: 12.07.2018 ರವರೆಗೆ ವಿಧಾನಸೌಧದಲ್ಲಿ ನಡೆಯುವ ಬಜೆಟ್ ಅಧಿವೇಶನದ ಸಂಬಂಧ ಪ್ರತಿಬಂಧಕಾಜ್ಞೆ ಜಾರಿ ಮಾಡುವ ಬಗ್ಗೆ.

ಪ್ರಸ್ತಾವನೆ:

ದಿನಾಂಕ: 09.07.2018 ರಿಂದ ದಿನಾಂಕ: 12.07.2018 ರವರೆಗೆ ವಿಧಾನಸೌಧದಲ್ಲಿ ಬಜೆಟ್ ಅಧಿವೇಶನ ನಡೆಯಲಿದ್ದು, ಈ ಸಮಯದಲ್ಲಿ ವಿವಿಧ ರಾಜಕೀಯ ಪಕ್ಷಗಳು, ವಿವಿಧ ಸಂಘಟನೆಗಳು ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ಮೆರವಣಿಗೆ, ಪ್ರತಿಭಟನೆ, ಧರಣಿ ಸತ್ಯಾಗ್ರಹ, ವಿಧಾನಸೌಧ ಮುತ್ತಿಗೆ, ಇತ್ಯಾದಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಾಧ್ಯತೆ ಇರುತ್ತವೆ. ಇದರಿಂದ ಅಧಿವೇಶನದ ಕಾರ್ಯಕಲಾಪಗಳಿಗೆ ಅಡಚಣೆ ಉಂಟಾಗುವುದಲ್ಲದೆ ಸಾರ್ವಜನಿಕ ನೆಮ್ಮದಿಗೆ ಭಂಗ ಹಾಗೂ ಸುಗಮ ಸಂಚಾರಕ್ಕೆ ತೊಂದರೆಯುಂಟಾಗುವ ಸಾಧ್ಯತೆಗಳು ಇರುವುದಾಗಿ ಗುಪ್ತವಾರ್ತಾ ಮಾಹಿತಿಯಿಂದ ತಿಳಿದುಬಂದಿರುತ್ತದೆ.

ಈ ನಿಟ್ಟಿನಲ್ಲಿ ನಾನು ಈ ಮೇಲ್ಕಂಡ ಮಾಹಿತಿಗಳ ಬಗ್ಗೆ ಖುದ್ದಾಗಿ ಮಾಡಿದ ವಿಚಾರಣೆಯಿಂದ ಮತ್ತು ಗುಪ್ತವಾಗಿ ಸಂಗ್ರಹಿಸಿದ ಮಾಹಿತಿಯಿಂದ ಹಾಗೂ ಗುಪ್ತವಾರ್ತಾ ವಿಭಾಗದ ಮಾಹಿತಿಯಿಂದ ಸಾಕಷ್ಟು ಸತ್ಯಾಂಶವಿದೆಯೆಂದು ತಿಳಿದು ಬಂದಿರುವುದರಿಂದಲೂ, ಅಧಿವೇಶನದ ಕಲಾಪಗಳು ಸುಗಮವಾಗಿ ನಡೆಯುವ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ ಎಸ್.ಬಿ/ಗು.ವಾ/ನಿಷೇದಾಜ್ಞೆ/ 33/2018 ದಿನಾಂಕ : 29.06.2018

ಈ ದಿಸೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನನಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು **ದಿನಾಂಕ: 09.07.2018 ರ ಬೆಳಿಗ್ಗೆ 06–00 ಗಂಟೆಯಿಂದ ದಿನಾಂಕ: 12.07.2018 ರ ಮಧ್ಯರಾತ್ರಿ 12–00 ಗಂಟೆಯವರೆಗೆ**ಬೆಂಗಳೂರು ನಗರದ ವಿಧಾನಸೌಧ ಕಟ್ಟಡದ ಸುತ್ತಲೂ ಎರಡು ಕಿ.ಮೀ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ನಿಷೇದಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನುಭಂಗ ಉಂಟು ಮಾಡುವ ಉದ್ದೇಶದಿಂದ 5 ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪು ಸೇರುವುದನ್ನು,
2. ಮೆರವಣಿಗೆ ಮತ್ತು ಸಭೆಗಳನ್ನು ನಡೆಸುವುದನ್ನು,
3. ಶಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳು, ಈಟಿಗಳು, ಗದೆಗಳು, ಕಲ್ಲು, ಇಟ್ಟಿಗೆ, ಚಾಕು ಇನ್ನೂ ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು,
4. ಯಾವುದೇ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,
5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿ ಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018ರ ಜೂನ್ ಮಾಹೆಯ ದಿನಾಂಕ 29 ರಂದು ಹೊರಡಿಸಲಾಗಿದೆ.

ಟಿ. ಸುನೀಲ್‌ಕುಮಾರ್
ಪೊಲೀಸ್ ಆಯುಕ್ತರು
ಬೆಂಗಳೂರು ನಗರ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಜೂನ್ ೨೯, ೨೦೧೮ (ಆಷಾಡ ೮, ಶಕ ವರ್ಷ ೧೯೪೦)	ನಂ. ೯೧೬
